ಕಲ್ಯಾಣ ಕಿರಣ



॥ ಓಂ ಶ್ರೀಗುರುಬಸವಲಿಂಗಾಯ ನಮಃ ॥

ಕೂಡಲ ಸಂಗಮ ಸುಕ್ಷೇತ್ರದಲ್ಲಿ

ಬಸವ ಕ್ರಾಂತಿ ದಿನದ ಅಂಗವಾಗಿ

1993 ನೇ ಜನವರಿ 12, 13, 14 ಮತ್ತು 15 ರಂದು

ನಡೆಯಲಿರುವ ಚಾರಿತ್ರಿಕ, ಐದನೆಯ

ಶರಣ ಮೇಳ

ಧ್ವಜಾರೋಹಣದ ಸನ್ನಿವೇಶದಲ್ಲಿ ಹಾಡಲಾಗುವ ಗೀತೆ

ಧ್ವಜಗೀತೆ

ಹೇ ಶರಣ ಬಂಧುಗಳೇ, ಬಸವ ಧ್ವಜವು ಹಾರುತಿದೆ
ಕ್ರಾಂತಿ ಕಹಳೆ ಮೊಳಗುತಿದೆ ! ಬನ್ನಿ ಬನ್ನಿ ಬನ್ನಿರೆಲ್ಲ ಭೇದಭಾವ ತೊಡೆದೀಗ ॥
ಜಾತಿಯತೆಯ ತಿಮಿರ ತೊಡೆದು ಧಾರ್ಮಿಕತೆಯ ತತ್ತ್ವ ಹಿಡಿದು
ಸಮತಾ ಪತಾಕೆಯ ಬಸವ ತತ್ತ್ವದೊಡನೆ ಮೆರೆಸುತ ॥
ಧರ್ಮವೆಮದು ಸದ್ಧರ್ಮ ಧರ್ಮವೆಮದು ಮಾನವಧರ್ಮ
ಧರ್ಮವೆಮದು ರಾಷ್ಟ್ರಧರ್ಮ ಧರ್ಮವೆಮದು ವಿಶ್ವಧರ್ಮ ॥೧॥

ಬಸವಾದಿ ಪ್ರಮಥರ ದಿವ್ಯ ಪರಂಪರೆಯವರು
ಮನುಕುಲದ ಸ್ವಾತಂತ್ರ್ಯಕೆ ದುಡಿವೆವೆಂಬ ಛಲದವರು ॥
ಎಮ್ಮ ಬಾಳ ಕಣಕಣವು ಬಸವ ಪಾದಕರ್ಪಣ
ಎಮ್ಮ ಚೆನ್ನ ತನುಮನವು ನಾಡಗುಡಿಗೆ ತರ್ಪಣ ॥೨॥

ಜಾತಿಮತ ಪಂಥಗಳ ಕೀಳುತ್ಭಾವ ಅಳಿಸುವಾ
ಭಿನ್ನಭೇದ ಮರೆತು ಬಾಳ್ವ ಪ್ರೇಮಭಾವ ಬೆಳೆಸುವಾ
ಶಾಂತಿ ಸ್ನೇಹ ಪ್ರೇಮ ಸಮತೆ ಅಂಗವಿಸಿ ಬಾಳುವಾ
ಬಸವ ಧರ್ಮ ಪ್ರಣತೆಯುರಿಗೆ ಬಾಳ ತೈಲವೆರೆಯುವಾ ॥೩॥

ರಚನೆ : **ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ.**

ವಿ. ಸೂ. : ಶರಣ ಮೇಳಕ್ಕೆ ಬರುವವರು ಹಾಡಬೇಕಾದ ಗೀತೆಗಳು ಇರುವ ಈ ಪ್ರತಿಯನು ಜೊತೆಗೆ ತನ್ನಿರಿ.

ಕಲ್ಯಾಣ ಕಿರಣ

ಸಂಪುಟ 21, ಸಂಚಿಕೆ : 7, ಬಸವ ಶಕೆ 887, ಜನವರಿ 1993

ಬಸವ ಕ್ರಾಂತಿ ದಿನದ ಅಂಗವಾಗಿ
ಕೂಡಲ ಸಂಗಮ ಸುಕ್ಷೇತ್ರದಲ್ಲಿ ನಡೆಯಲಿರುವ

ಶರಣ ಮೇಳಕ್ಕೆ ಸ್ವಾಗತ

ಜನ್ಮ ಭೂಮಿ ಭಾರತ ಧರ್ಮಕ್ಷೇತ್ರ ಸಂಗಮ
ಶರಣ ಮೇಳಕೆ ಬಂದಿರುವ ಶರಣರಿಗೆ ಸ್ವಾಗತ ॥ ಪ ॥

ಗುರುಗಳಿಗೆ ಸ್ವಾಗತ ಹಿರಿಯರಿಗೆ ಸ್ವಾಗತ
ಕಿರಿಯರಿಗೆ ಸ್ವಾಗತ ಸರ್ವರಿಗೂ ಸ್ವಾಗತ ॥ ಅ.ಪ. ॥

ಧರ್ಮ ನೀತಿ ನ್ಯಾಯ ಶಾಂತಿ
ಸಾರುತಿರುವ ಮೇಳವು
ಮನುಜರೆಲ್ಲರೊಂದೆ ಎಂದು
ಆದರಿಸುವ ಮೇಳವು ॥ ಓ ದಿವ್ಯ ಮೇಳವು ॥ ೧ ॥

ಶ್ರೀ ಸಂಗಮೇಶನ ದಿವ್ಯ ತಾಣ ಸಂಗಮ
ಗುರು ಬಸವೇಶನ ಐಕ್ಯ ಕ್ಷೇತ್ರ ಸಂಗಮ
ಮಲಪ್ರಭೆ - ಕೃಷ್ಣೆಯರು ಸೇರುತಿರುವ ಸಂಗಮ
ಮಹಾಮನೆಯ ಹೊಂದಿರುವ ಧರ್ಮಕ್ಷೇತ್ರ ಸಂಗಮ
ಓ ದಿವ್ಯ ಕ್ಷೇತ್ರವು ॥ ೨ ॥

ಬಸವ ಕ್ರಾಂತಿ ದಿವ್ಯ ದಿನದಿ ನಾವು - ನೀವು ಸೇರುವಾ
ಗುರು ಬಸವಣ್ಣನ ಹಿಗ್ಗಿನಿಂದ ಸ್ಮರಿಸುವಾ
ಶರಣ ಧರ್ಮ ಅರಿಯುವ ಶರಣರಾಗಿ ಬೆಳೆಯುವ
ಬಸವ ಕಿರಣವಾಗಿ ನಾವು ಇಲ್ಲಿಂದ ಸಾಗುವಾ ॥
ಓ ದಿವ್ಯ ಮೇಳವು, ಓ ದಿವ್ಯ ಮೇಳವು ॥ ೩ ॥

ರಚನೆ : **ಜಗದ್ಗುರು ಮಾತೆ ಮಹಾದೇವಿ**

ಕಪಿಲ ಸಿದ್ಧ ಮಲ್ಲಿಕಾರ್ಜುನಾ
ನಿಮ್ಮ ಸಂಗನೆ ಬಸವಣ್ಣ ಬಂದು
ಮರ್ತ್ಯಲೋಕದಲ್ಲಿ ಮಹಾಮನೆಯ ಕಟ್ಟಿದರೆ
ಮರ್ತ್ಯಲೋಕವೆಲ್ಲವೂ ಭಕ್ತಿ ಸಾಮ್ರಾಜ್ಯವಾಯಿತ್ತು.

-ಶಿವಯೋಗಿ ಸಿದ್ಧರಾಮೇಶ್ವರ

|| ಓಂ ಶ್ರೀ ಗುರು ಬಸವಲಿಂಗಾಯ ನಮಃ ||

ಕೂಡಲ ಸಂಗಮ ಸುಕ್ಷೇತ್ರದಲ್ಲಿ ಬಸವ ಕ್ರಾಂತಿ ದಿನದ ಅಂಗವಾಗಿ

ಶರಣ ಮೇಳ

1993 ನೆಯ ಜನವರಿ
12, 13, 14 ಮತ್ತು 15 ರಂದು

ಶರಣ ಬಂಧುಗಳೇ,

ಮಹಾಮಾನವತಾವಾದಿ, ಮಂತ್ರಪುರುಷ, ವಿಶ್ವವಿಭೂತಿ ಬಸವಣ್ಣನವರ ತತ್ವಗಳಲ್ಲಿ, ಶ್ರದ್ಧೆ-ವಿಶ್ವಾಸವಿರುವ ಬಸವ ಭಕ್ತರು, ಬಸವ ತತ್ವಾಭಿಮಾನಿಗಳು, ಬಸವ ಧರ್ಮೀಯರು, ಲಿಂಗವಂತರು ಎಲ್ಲರೂ ವರ್ಷಕ್ಕೊಮ್ಮೆಯಾದರು ಒಂದು ಸ್ಥಾನದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಪರಸ್ಪರರಲ್ಲಿ ಸಮಾನತ್ವ, ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ವಿಶ್ವ ಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಲಿಂಗೈಕ್ಯಕ್ಷೇತ್ರ ಕೂಡಲಸಂಗಮದಲ್ಲಿ 1988 ನೆಯ ಇಸವಿ ಜನವರಿ 14, 15 ಮತ್ತು 16 ರಂದು ಪ್ರಥಮ ಚಾರಿತ್ರಿಕ ಶರಣ ಮೇಳವು ಜರುಗಿತಷ್ಟೇ, ಮೊಟ್ಟ ಮೊದಲನೆಯ ಈ ಐತಿಹಾಸಿಕ ಬೃಹತ್ ಮೇಳವು ಮೂರುವರೆ ಲಕ್ಷಕ್ಕೂ ಮಿಕ್ಕಿದ ಜನಸಮೂಹವನ್ನು ಆಕರ್ಷಿಸಿತು. ತುಂಬಿಸಿಂತ ಬಸವ ಸಾಗರದ ಅಲೆಗಳೊಡನೆ ಸ್ಪರ್ಧಿಸುವಂತೆ ಜನಸಾಗರದ ಸಮೂಹವು ಸಮಾವೇಶವಾಗಿ ಬಸವೋದ್ಯಾನದಲ್ಲಿ ನಿರ್ಮಿತವಾದ ಬಸವ ಮಂಟಪದಲ್ಲಿ ಸಮುದಾಯ ಪ್ರಾರ್ಥನೆಯನ್ನು ಮಾಡಿತು.

ಇಂತಹ ಶರಣ ಮೇಳವು ಪ್ರತಿವರ್ಷವೂ ಬಸವಕ್ರಾಂತಿ (ಮಕರ ಸಂಕ್ರಾಂತಿ) ದಿನದ ಅಂಗವಾಗಿ ನಡೆಯಲಿದ್ದು ಆರನೆಯ ಶರಣ ಮೇಳವು 1993 ನೇ ಇಸವಿಯ ಜನವರಿ 12, 13, 14 ಮತ್ತು 15 ರಂದು ಏರ್ಪಾಟಾಗಲಿದೆ. ಹಲವಾರು ಪ್ರಮುಖ ಮಠಾಧೀಶರು, ಪ್ರವಚನಕಾರರು, ಗಣ್ಯರು, ಸಾಹಿತಿಗಳು ಭಾಗವಹಿಸಿ ಉಪನ್ಯಾಸ ಮಾಡುವರು. ಮುಸಲ್ಮಾನ್ ಧರ್ಮೀಯರಿಗೆ ಮೆಕ್ಕಾ ಧರ್ಮ ಕ್ಷೇತ್ರವಾದಂತೆ, ಸಿಖ್ಖರಿಗೆ ಅಮೃತಸರವು ಪವಿತ್ರ ಕ್ಷೇತ್ರವಾದಂತೆ, ಬಸವ ಧರ್ಮಾನುಯಾಯಿಗಳಿಗೆ ವಿಶ್ವಗುರು ಬಸವಣ್ಣನವರ ಐಕ್ಯಸ್ಥಾನ ಕೂಡಲಸಂಗಮವೇ ಧರ್ಮಕ್ಷೇತ್ರ, ಇಂತಹ ಪವಿತ್ರ ತಾಣದಲ್ಲಿ ಸಹೋದರ ಭಾವನೆಯಿಂದ ಎಲ್ಲರೂ ಲಕ್ಷಲಕ್ಷಗಟ್ಟಳೆ ಸಂಖ್ಯೆಯಲ್ಲಿ ಬನ್ನಿರಿ.

ಶರಣರ ಬರವೆಮಗೆ ಪ್ರಾಣಜೀವಾಳ

ಬೆಂಗಳೂರು ವಿಳಾಸ:
ಬಸವ ಮಂಟಪ, 2035
2 ನೇ ಬ್ಲಾಕ್, ಕಾರ್ಡ್ ರಸ್ತೆ,
ರಾಜಾಜಿನಗರ, ಬೆಂಗಳೂರು - 560010
ದೂರವಾಣಿ : 325335

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ
ಕೂಡಲಸಂಗಮ - 587115.
ತಾ-ಹುನಗುಂದ, ಜಿಲ್ಲೆ-ಬಿಜಾಪುರ
ದೂರವಾಣಿ : 22[illegible]

ಅಖಂಡ ವಚನ ಪಠಣ ಸಪ್ತಾಹ ಕಾರ್ಯಕ್ರಮ ಪ್ರಾರಂಭೋತ್ಸವ

ದಿ. 9-1-1993, ಶನಿವಾರ ಸಮಯ : ಬೆಳಿಗ್ಗೆ 8 ಗಂಟೆ

ಬಸವಣ್ಣ ನಡೆದುದೇ ಮಾರ್ಗ, ನುಡಿದುದೇ ವೇದ
ಭಕ್ತಿಯ ಕುಳವನು ಬಸವಣ್ಣನೇ ಬಲ್ಲನು
ಪ್ರಸಾದದ ನೆಲೆಯನು ಬಸವಣ್ಣನೇ ಬಲ್ಲನು
ಬಸವಣ್ಣ ನಡೆದುದೇ ಮಾರ್ಗ ಅಖಿಳಗಣಂಗಳಿಗೆ
ನುಡಿದುದೇ ವೇದ ಮಹಾಪುರುಷರಿಗೆ

- ಶ್ರೀ ಮರುಳ ಶಂಕರದೇವರು

ಬಸವ ಧರ್ಮ ಪೀಠದ ಮಹಾಮನೆಯ ಬಸವ ಮಂಟಪದಲ್ಲಿ ಅಖಂಡ ವಚನ ಪಠಣ ಕಾರ್ಯಕ್ರಮವು ಪ್ರಾರಂಭವಾಗಲಿದ್ದು, ಒಬ್ಬೊಬ್ಬರು ಒಂದು ಗಂಟೆಯ ಕಾಲ ವಚನ ಪಠಣವನ್ನು ಮಾಡಲಿದ್ದಾರೆ. ಪ್ರತಿದಿನ ವಿಶೇಷ ಪೂಜಾನಂತರ ಬೆಳಗಿನ 6 ಗಂಟೆಗೆ ವಚನ ಪಠಣ ಆರಂಭವಾಗಿ ರಾತ್ರಿ 10 ರ ವರೆಗೆ ನಡೆಯುವುದು. ಈ ರೀತಿ ಪಠಣ ಕಾರ್ಯಕ್ರಮವು ಒಂದು ವಾರ ಕಾಲ ನಡೆಯಲಿದ್ದು ಶನಿವಾರ ದಿ. 16-1-1993 ರಂದು 8 ಗಂಟೆಗೆ ಮಂಗಲಗೊಳ್ಳಲಿದೆ. ವಚನ ಪಠಣದ ಮಧ್ಯೆ ಶ್ರೀ ಗುರು ಬಸವಲಿಂಗ ಮಂತ್ರ ಪಠಣವೂ ವಿಶೇಷ ಪೂಜೆಯೊಡನೆ ಆಗಾಗ ನಡೆಯುತ್ತದೆ.

ದಿ. 9-1-93 ರಂದು ಬೆಳಿಗ್ಗೆ 8 ಗಂಟೆಗೆ ಬಸವ ಧರ್ಮದ ಮಹಾಜಗದ್ಗುರು ಪೀಠದ ಪೀಠಾಧೀಶರಾದ ಪೂಜ್ಯ **ಶ್ರೀಮನ್ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳು** ಪ್ರಥಮವಾಗಿ ಪಠಣವನ್ನು ಮಾಡಿ, ಸಪ್ತಾಹವನ್ನು ಉದ್ಘಾಟಿಸುವರು. ಮಹಾತೀರ್ಥವನ್ನು ಅಂದು ಸಿದ್ಧಪಡಿಸುತ್ತಿದ್ದು ಕರುಣ ಪ್ರಸಾದವನ್ನು ಎಲ್ಲರಿಗೂ ವಿತರಿಸಲಾಗುವುದು.

ಶರಣ ಬಂಧುಗಳಿಗೆ ಸೂಚನೆ

ಅಖಂಡ ವಚನ ಪಠಣದಲ್ಲಿ ಭಾಗವಹಿಸುವ ಅಪೇಕ್ಷೆಯುಳ್ಳ ಶರಣರು ಮೊದಲಿಗೇ ತಮ್ಮ ಹೆಸರುಗಳನ್ನು ಬರೆದು ಕಳಿಸಬಹುದು. 112 ಜನರಿಗೆ ಮಾತ್ರ ಅವಕಾಶವಿರುವ ಕಾರಣ ಬೇಗನೆ ಹೆಸರುಗಳನ್ನು ತಿಳಿಸುವುದು ಕ್ಷೇಮ.

ನಿಯಮ : ಸ್ನಾನ ಮಾಡಿ, ಮಡಿವಸ್ತ್ರಗಳನ್ನುಟ್ಟು, ಅಲ್ಲಿ ಒದಗಿಸುವ ವಿಶೇಷ ಮೇಲು ವಸ್ತ್ರವನ್ನು ಹೊದ್ದು ಪಠಣ ಮಾಡಬೇಕು.

ವಚನ ಪಠಣವನ್ನು ಒಂದು ಧಾರ್ಮಿಕ ವಿಧಿಯನ್ನಾಗಿ ರೂಪಿಸಿಕೊಳ್ಳಬೇಕು. ಇದಕ್ಕೆ ನೆರವಾಗುವಂತೆ 'ವಚನ ಸಂಗಮ' ಕನ್ನಡ ಪುಸ್ತಕವು ಕನ್ನಡ, ತೆಲುಗು, ತಮಿಳು, ಮರಾಠಿ ಭಾಷೆಗಳಲ್ಲಿ ಭಾವಾರ್ಥ ಸಹಿತವಾಗಿ ಲಭ್ಯವಿರುತ್ತದೆ. ಬೆಲೆ : 5-50

ನಿತ್ಯ ದೀಕ್ಷಾ ಸಮಾರಂಭ : ಅನೇಕ ಶರಣ ಬಂಧುಗಳ ಕೋರಿಕೆ ಮೇರೆಗೆ ದಿನನಿತ್ಯವೂ ಇಷ್ಟಲಿಂಗದೀಕ್ಷೆ ಮತ್ತು ಮಂತ್ರದೀಕ್ಷೆಗಳನ್ನು ಕೊಡಲು ಏರ್ಪಾಡು ಮಾಡಿದ್ದು ಮಹಾಮನೆ ಮಹಾಮನೆಯಲ್ಲಿ ಪೂಜ್ಯ ಶ್ರೀ ಸದಾನಂದ ಪ್ರಭು ಸ್ವಾಮೀಜಿಯವರು ಬೆಳಿಗ್ಗೆ 7-30 ರಿಂದ

ಶರಣ ಮೇಳ - ಬಸವ ಧರ್ಮ ಸಂಸತ್ ಸಭೆ
ಚಿಂತನಗೋಷ್ಠಿ

ದಿ. 12-1-1993, ಮಂಗಳವಾರ   ಸಮಯ : ಬೆಳಿಗ್ಗೆ 10 ಗಂಟೆಗೆ

ಪೂಜ್ಯ ಶ್ರೀ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮೀಜಿ ಅವರಿಂದ
ಬಸವ ಧ್ವಜಾರೋಹಣ ಮತ್ತು ದಿವ್ಯ ಸನ್ನಿಧಿ

ಅಧ್ಯಕ್ಷತೆ : ಶರಣ ಕಕ್ಕಯ್ಯ ಪೋಳ, ಬಿಜಾಪುರ
ಸಭಾಪತಿ : ಶರಣ ಪುಟ್ಟರುದ್ರಪ್ಪ, ಬೆಂಗಳೂರು
ಉಪಸಭಾಪತಿ : ಶರಣ ಡಿ.ಎಂ. ಧನ್ನೂರು, ತಾಳೀಕೋಟೆ
ಮುಖ್ಯ ಅತಿಥಿ : ಶರಣ ಜಿ.ಬಿ. ಮಹಾಲಿಂಗ ಶೆಟ್ಟಿ, ಹುಬ್ಬಳ್ಳಿ
ಪ್ರಸ್ತಾವನೆ : ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಸಭಾ ನಿರ್ವಹಣೆ : ಶರಣ ಡಾ॥ ನಿತೀನಚಂದ್ರ ಹತ್ತೀಕಾಳ, ಧಾರವಾಡ
ಚಿಂತನ ಮಂಥನ : ಶರಣ - ಶರಣೆಯರಿಂದ

ಸದಸ್ಯರ ಹಾಜರಿ ತೆಗೆದುಕೊಂಡ ಬಳಿಕ ಚರ್ಚಾಗೋಷ್ಠಿ ಆರಂಭ

ಚರ್ಚಿಸಲಾಗುವ ವಿಷಯಗಳು

೧. ಕುಟುಂಬ ಯೋಜನೆ - ಧಾರ್ಮಿಕ ಸಮ್ಮತಿ.
೨. ಅಯೋಧ್ಯೆಯ ಪ್ರಸಂಗ - ಬಸವ ತತ್ವಾನುಯಾಯಿಗಳ ಒಲವು ಮತ್ತು ನಿಲವು ಏನಿರಬೇಕು ?
೩. ರಾಷ್ಟ್ರೀಯ ಬಸವ ದಳ - ಶರೀರ ಶಿಕ್ಷಣ, ಯೋಗ, ಆತ್ಮ ರಕ್ಷಣಾ ತರಬೇತಿ; ಇನ್ನಿತರ ಚಟುವಟಿಕೆಗಳು.
೪. ಜಾಗತಿಕ ಬಸವ ಧರ್ಮಮಹಾಸಭೆಯ ಕಲ್ಪನೆ.
೫. ಶರಣ ಮೇಳ ನಿರ್ವಹಣೆಯಲ್ಲಿ ಬಸವ ಧರ್ಮ ಸಂಸತ್ ಮತ್ತು ರಾಷ್ಟ್ರೀಯ ಬಸವ ದಳಗಳ ಹೊಣೆಗಾರಿಕೆ.
೬. ಶರಣ ಮೇಳ ನಿರ್ವಹಣೆ - ಸಂಚಾಲಕ ಸಮಿತಿಯ ರಚನೆ.
೭. ಉಷಃಪಾನ - ನಿಸರ್ಗ ಚಿಕಿತ್ಸೆ ಧಾರ್ಮಿಕ ನೇಮ.
೮. ಶರಣವ್ರತ ಸ್ವೀಕಾರ - ನಿಯಮಗಳ ರಚನೆ.
೯. ಬಸವ ಧರ್ಮ ಸಂಸತ್ ಸದಸ್ಯರ ವಾರ್ಷಿಕ ಸಮಾವೇಶ ಇತ್ಯಾದಿ ಇತ್ಯಾದಿ.

ಈ ವಿಷಯಗಳನ್ನು ವಿವಿಧ ಶರಣ ಬಂಧುಗಳು ಸೂಚಿಸಿದ್ದಾರೆ. ಭಾಗವಹಿಸಿದವರು ಯಾವುದಾದರೂ ಮಹತ್ವಪೂರ್ಣ ಪ್ರಶ್ನೆಗಳನ್ನು ಸೂಚಿಸಿದರೆ ಅದರ ಪ್ರಾಮುಖ್ಯತೆಯ ಆಧಾರದ ಮೇಲೆ ಅದನ್ನು ಚರ್ಚೆ - ನಿರ್ಣಯಗಳಿಗೆ ಎತ್ತಿಕೊಳ್ಳಲಾಗುವುದು. ಕೇಳುವ ಸಮಸ್ಯೆಗಳೇನಾದರೂ ಇದ್ದರೆ ಸಿದ್ಧತೆ ಮಾಡಿಕೊಂಡು ಬರಬಹುದು ಮತ್ತು ಮೇಲೆ ಸೂಚಿಸಿದ ವಿಷಯಗಳ ಬಗ್ಗೆ

ಉಪಸ್ಥಿತರು

ಪೂಜ್ಯ ಶ್ರೀ ಸದ್ಗುರು ಸದಾನಂದ ಪ್ರಭು ಸ್ವಾಮೀಜಿ, ಶಿರಗುಪ್ಪಿ
ಪೂಜ್ಯ ಶ್ರೀ ಸಿ.ಪ್ರ ಜಗದ್ಗುರು ದೇವರು, ವಿರಕ್ತಮಠ, ಮುಧೋಳ
ಪೂಜ್ಯ ಶ್ರೀ ಶಿವಲಿಂಗೇಶ್ವರ ಸ್ವಾಮಿಗಳು, ವಿರಕ್ತಮಠ, ತೇರದಾಳ
ಪೂಜ್ಯ ಶ್ರೀ ಜಯಚಂದ್ರಶೇಖರ ಸ್ವಾಮಿಗಳು, ಚಿಕ್ಕಮಗಳೂರು
ಪೂಜ್ಯ ಶ್ರೀ ಬಸವಲಿಂಗ ಪಟ್ಟಾಧ್ಯಕ್ಷರು, ಹಿರೇಮಠ, ಭಾಲ್ಕಿ
ಪೂಜ್ಯ ಶ್ರೀ ಶಿವಾನಂದ ಸ್ವಾಮಿಗಳು, ಹುಲ್ಸೂರು
ಪೂಜ್ಯ ಶ್ರೀ ಶಿವಕುಮಾರ ಸ್ವಾಮಿಗಳು, ಮಡಿಕೆಶಿರೂರು
ಪೂಜ್ಯ ಶ್ರೀ ಶಿವಾನಂದ ಸ್ವಾಮಿಗಳು, ಕರಜಗಿ, ಮಹಾರಾಷ್ಟ್ರ
ಪೂಜ್ಯ ಶ್ರೀ ನಿತ್ಯಾನಂದ ಸ್ವಾಮಿಗಳು, ಸತ್ತಿ
ಪೂಜ್ಯ ಶ್ರೀ ಮಹಾನಂದಾ ತಾಯಿ ಹಿರೇಮಠ, ಮುಗಳಿ

ಶರಣರುಗಳಾದ :

ಅಂದಾನಪ್ಪ ಕುಂದರಗಿ, ಗಜೇಂದ್ರಗಡ
ಡಾ॥ ಜಿ.ಆರ್. ತಮಗೊಂಡ, ಬಾಗಿಲಕೋಟೆ
ಡಾ॥ ಸಿ.ಎಸ್. ಪುರಾಣಮಠ, ರಾಣೇಬೆನ್ನೂರು
ಎಸ್.ಎಸ್. ಹಿರಂಡಗಿ, ಬಿಜಾಪುರ
ಬಿ.ಸಿ. ಚಂದ್ರಪ್ಪಾಜಿ ಅರಸು, ಬ್ರಹ್ಮಸಂದ್ರ
ಬಸವರಾಜ ಲುಕ್, ಬಾಗಲಕೋಟೆ
ಬಸವರಾಜ ಮಡಿವಾಳರ, ಆಲಮಟ್ಟಿ
ಹೆಚ್.ಎಸ್. ಬಸವರಾಜ, ಭದ್ರಾವತಿ
ಜಯಮ್ಮ ಚಂದ್ರಪ್ಪ, ಶಿವಮೊಗ್ಗ
ಟಿ. ಬಸವರಾಜಪ್ಪ, ವಿಜಯಪುರ
ಬಸವಕುಮಾರ ಪಾಟೀಲ, ಬೀದರ್
ಡಾ॥ ಶಿವಗೌಡ ಪಾಟೀಲ, ಸಂಕೇಶ್ವರ
ಬಾಣೂರು ಚನ್ನಪ್ಪ, ಅಜ್ಜಂಪುರ
ಕಲ್ಯಾಣಪ್ಪ ಪರಮಾದಿ, ಹುಬ್ಬಳ್ಳಿ
ಚಂದ್ರಶೇಖರಪ್ಪ ಕರವೀರಶೆಟ್ಟರು ಹುಬ್ಬಳ್ಳಿ
ಎಸ್.ಬಿ. ಸುಲ್ತಾನಪುರಿ, ಬೆಳಗಾಂವ
ಮುನಿನಾರಾಯಣಪ್ಪ, ವಿಜಯಪುರ
ಶಾರದಮ್ಮ ಭೀಮಲಿಂಗನಗೌಡ, ಬಳ್ಳಾರಿ
ಸರೋಜಮ್ಮ ಎಂ. ನಾಗರಾಜು, ಮೈಸೂರು
ವಿರೂಪಾಕ್ಷಪ್ಪ ಗಿರಿಸಾಗರ, ಜಮಖಂಡಿ
ನಿಜಲಿಂಗಪ್ಪ ಹೊಳಿ, ಬಿಜಾಪುರ
ಬಿ.ಪಿ. ಹಂಪನಗೌಡರು, "
ಶಿವಶಂಕರ್ ನಾಗಪ್ಪ ಕಾಡಾದಿ, ಸೊಲ್ಲಾಪುರ
ಕಲ್ಲಿನಾಥ ಕೊಂಡಗುಳಿ, ಹುಬ್ಬಳ್ಳಿ
ಡಿ.ಎಂ. ಧನ್ನೂರು, ತಾಳೀಕೋಟೆ
ಈಶ್ವರಯ್ಯ ಪೀ.ಮ.ಸ, ಅನಂತಪುರ
ಸು. ಸದಾಶಿವಪ್ಪ, ಚಾಮರಾಜನಗರ
ಎಂ. ನಂಜಪ್ಪ, ಚಾಮರಾಜನಗರ

ಎಸ್. ಲಿಂಗಣ್ಣ, ಚಿತ್ರದುರ್ಗ
ಗುರುಲಿಂಗಮೂರ್ತಿ, ಬೆಂಗಳೂರು
ಬಾಲಚಂದ್ರ ಚೆನ್ನಿ, ಮಹಾಲಿಂಗಪುರ
ಚಂದ್ರಶೇಖರಪ್ಪ ಯರನಾಳ, ಇಳಕಲ್
ವಿಶ್ವನಾಥ ಡೋಣೂರು, ಶಹಾಪುರ
ಜಿ.ಜೆ. ಪಾಟೀಲ, ಕೂಡಲಸಂಗಮ
ಆರ್.ಎಸ್. ಹೊನ್ನಪ್ಪನವರು, ಧಾರವಾಡ
ಬಿ.ಎಂ. ಹೊರಕೇರಿ, ಬಾದಾಮಿ
ಡಿ.ಬಿ. ಕೊಳ್ಳಿ, ಬೈಲಹೊಂಗಲ
ಮೃತ್ಯುಂಜಯ ಅಂಗಡಿ, ಕಡಕೋಳ
ಎಂ.ಎಂ. ಹುಂಡೇಕಾರ, ಬಿಜಾಪುರ
ಎಲ್. ಗುರುಸ್ವಾಮಿ, ಬೆಂಗಳೂರು
ಸಿದ್ಧರಾಮಪ್ಪ ಬಾಳಪ್ಪಗೋಳ್, ಗುಲ್ಬರ್ಗಾ
ಜಿ. ಚನ್ನಯ್ಯ ಚಳ್ಳಕೆರೆ
ಶಿವಾನಂದಪ್ಪ ರುಳಿ, ಇಳಕಲ್
ಸಿ. ಬಸವರಾಜು, ತುಮಕೂರು
ಬಸವರಾಜಪ್ಪ ನಾಡಗೌಡ, ಗಣಜಲಿ
ಬಾಣೂರು ಹಿರಣ್ಣಯ್ಯ ತರೀಕೆರೆ
ಶಿ. ರುದ್ರಸ್ವಾಮಿ, ಮೈಸೂರು
ಕೂಡಲಸಂಗಮ ಉಮರಾಣಿ, ಐಗಳಿ
ಆರ್. ಮಲ್ಲಿಕಾರ್ಜುನಪ್ಪ, ಬಾಗೇಪಲ್ಲಿ
ಡಿ.ಎಸ್. ವಿಜಯಕುಮಾರ್, ಶಿವಮೊಗ್ಗ
ಲಿಂಗರಾಜು ಇಂಗಳಳ್ಳಿ, ಹುಬ್ಬಳ್ಳಿ
ರಾಮಚಂದ್ರಪ್ಪ, ಚಿತ್ರದುರ್ಗ
ಜೈರಾಜ್ ವಕೀಲರು, ಬೆಂಗಳೂರು
ಟಿ.ಎ.ದಾಸಪ್ಪ, ತಿಪಟೂರು
ಜಿ. ಶಾಂತಯ್ಯ, ಗನ್ನಾಯ್ಕನಹಳ್ಳಿ
ಬಸವರಾಜು, ತಿಮ್ಮಪ್ಪಯ್ಯನಹಳ್ಳಿ

ಇನ್ನಿತರ ಬಸವ ಧರ್ಮ ಸಂಸತ್ ಸದಸ್ಯರು

ರಾಷ್ಟ್ರೀಯ ಬಸವ ದಳಗಳ ಸಂಘಟಕರು, ಸಂಚಾಲಕರು, ಸದಸ್ಯರೂ

ಬಸವ ಧರ್ಮದ ಮಹಾಜಗದ್ಗುರು ಪೀಠದ ಪ್ರಥಮ ವಾರ್ಷಿಕೋತ್ಸವ

ಬಸವಶಕೆ 887 — ವೇಳೆ : ಸಂಜೆ 5 ಗಂಟೆ
ಮಂಗಳವಾರ, ದಿ 12-1-1993 — ಮಹಾಮನೆ ಮಹಾಮಠ

ಬಸವ ಪೀಠವು ಎದ್ದು ಒಸೆದು ನಾಣ್ಯವು ಹುಟ್ಟಿ
ಬಸವನ ಮುದ್ರೆ ಮೆರೆದಾವು। ಧರೆಯವಗೆ
ವಶವಾಗದಿಹುದೆ ಸರ್ವಜ್ಞ ॥

ಧರ್ಮಪಿತ ಶ್ರೀ ಗುರುಬಸವ ತಂದೆಯ ದಿವ್ಯ ಪ್ರೇರಣೆಯಂತೆ ಅವರು ಐಕ್ಯರಾದ ಧರ್ಮಕ್ಷೇತ್ರ ಕೂಡಲ ಸಂಗಮದಲ್ಲಿ ಬಸವ ಧರ್ಮದ ಮಹಾಜಗದ್ಗುರು ಪೀಠವನ್ನು ಬಸವ ಶಕೆ 886, ಸೋಮವಾರ 13-1-1992 ರಂದು ಸಂಸ್ಥಾಪನೆ ಮಾಡಲಾಯಿತು. ಇದರ ಉದ್ದೇಶ, ಬಸವ ತತ್ತ್ವದ ಪ್ರಚಾರ, ಸಮಾನತೆಯ ಪ್ರತಿಪಾದನೆ, ಜಾತಿ ವರ್ಣ ವರ್ಗ ಲಿಂಗ ಭೇದವಿಲ್ಲದೆ ಎಲ್ಲ ಮಾನವರ ಹಕ್ಕುಗಳನ್ನು ರಕ್ಷಿಸುವುದು; ಧರ್ಮನಿಷ್ಠೆ-ರಾಷ್ಟ್ರಪ್ರೇಮಗಳನ್ನು ಜನರಲ್ಲಿ ಬೆಳೆಸುವುದು, ಸಕಲ ಜೀವಾವಳಿಗೆ ಲೇಸನ್ನೇ ಬಯಸಿ, ಮರ್ತ್ಯಲೋಕದ ಈ ಕರ್ತನ ಕಮ್ಮಟದಲ್ಲಿ ಕಲ್ಯಾಣ ರಾಜ್ಯವನ್ನು ಕಟ್ಟುವುದು.

ಇಂತಹ ಧರ್ಮಪೀಠವನ್ನು ಅಪೂರ್ವ ವಾಗ್ಮಿಗಳು, ಕ್ರಾಂತಿಕಾರಿ ಧರ್ಮ ಪ್ರಸಾರಕರು, ಬಸವ ಯುಗ ನಿರ್ಮಾಪಕರೂ ಆದ

ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳು

ಪ್ರಥಮ ಪೀಠಾಧೀಶರಾಗಿ ಆರೋಹಣ ಮಾಡಿದ್ದು, ಈ ಪೀಠಾರೋಹಣದ ವಾರ್ಷಿಕೋತ್ಸವವನ್ನು 12-1-1993 ರಂದು ಆಚರಿಸಲಾಗುತ್ತಿದೆ.

ಧ್ವಜಾರೋಹಣ : **ಶರಣ. ಸಿ. ಎಸ್. ನಾಡಗೌಡ** (ಮಾಜಿ ಸಚಿವರು, ಮುದ್ದೇಬಿಹಾಳ)

ಸಮ್ಮುಖ :
ಪೂಜ್ಯ ಶ್ರೀ ಸದ್ಗುರು ಸದಾನಂದ ಪ್ರಭುಸ್ವಾಮೀಜಿ
(ಮಂಗಲಮಠ, ಶಿರಗುಪ್ಪಿ)
ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿ
(ಜಗನ್ಮಾತಾ ಅಕ್ಕಮಹಾದೇವಿ ಆಶ್ರಮ, ಧಾರವಾಡ)
ಪೂಜ್ಯ ಶ್ರೀ ನಿ.ಪ್ರ ಜಗದ್ಗುರು ದೇವರು ಸ್ವಾಮೀಜಿ
(ಶ್ರೀ ಮಜ್ಜಗದ್ಗುರು ಬಸವಲಿಂಗೇಶ್ವರ ಸಂಸ್ಥಾನ ಮಠ, ಮುಧೋಳ)
ಪೂಜ್ಯ ಶ್ರೀ ಮ.ಘ.ಚ. ಬಸವಲಿಂಗ ಪಟ್ಟದ್ದೇವರು,
(ಹಿರೇಮಠ ಸಂಸ್ಥಾನ, ಭಾಲ್ಕಿ)
ಪೂಜ್ಯ ಶ್ರೀ ನಿ.ಪ್ರ. ಶಿವಾನಂದ ಸ್ವಾಮಿಗಳು
(ಗುರುಬಸವೇಶ್ವರ ಸಂಸ್ಥಾನ ಮಠ, ಹುಲಸೂರು)
ಪೂಜ್ಯ ಶ್ರೀ ಸಿದ್ಧಲಿಂಗದೇವರು
(ಸಿದ್ಧಲಿಂಗೇಶ್ವರಮಠ, ದಾವೂರ, ಗುಲ್ಬರ್ಗಾ)
ಪೂಜ್ಯ ಶ್ರೀ ಷ.ಬ್ರ. ಶಿವಾನಂದ ಸ್ವಾಮೀಜಿ
(ವಿರಕ್ತಮಠ, ತಮಲೂರು)
ಪೂಜ್ಯ ಶ್ರೀ ಶಿವಕುಮಾರ ಮಹಾಸ್ವಾಮಿಗಳು

ಗೌರವಾರ್ಪಣೆ-

ರಾಷ್ಟ್ರೀಯ ಬಸವ ದಳದ ಸರ್ವೋಚ್ಚ ಸಮಿತಿ ಸದಸ್ಯರಿಂದ
ಶರಣ. ಎನ್. ಪುಟ್ಟರುದ್ರಪ್ಪ, ಬೆಂಗಳೂರು
ಶರಣ. ಕಲ್ಯಾಣಪ್ಪ ಪರಮಾದಿ, ಹುಬ್ಬಳ್ಳಿ
ಶರಣ. ಬಸವಕುಮಾರ್ ಪಾಟೀಲ್, ಬೀದರ
ಶರಣ. ಎಸ್. ಲಿಂಗಣ್ಣ, ಚಿತ್ರದುರ್ಗ
ಶರಣ. ಸುಬ್ಬಣ್ಣ ನಂಜಪ್ಪ ಮೈಸೂರು, ಧಾರವಾಡ
ಶರಣೆ. ಶಾರದಮ್ಮ ಭೀಮಲಿಂಗನಗೌಡ, ಬಳ್ಳಾರಿ
ಶರಣೆ. ಜಯಮ್ಮ ಚಂದಪ್ಪ, ಶಿವಮೊಗ್ಗ
ಶರಣೆ. ಸರೋಜಮ್ಮ ನಾಗರಾಜು, ಮೈಸೂರು

ದಾನಿಗಳಿಗೆ ಸತ್ಕಾರ :

ದಾನಿಗಳ ಎರಡನೆಯ ಯಾದಿ

ಶರಣರುಗಳಾದ :

೪೮. ಸದ್ಭಕ್ತ ಮಂಡಳಿ, ನದಿ ಇಂಗಳಗಾಂವ, ತಾ - ಅಥಣಿ
೪೯. ರಾಮಪ್ಪ ದೇಸ್ತೋಟ್, ತೇರದಾಳ
೫೦. ಬಸಪ್ಪಣ್ಣಾ ಯಾದವಾಡ, ತೇರದಾಳ
೫೧. ಡಾ॥ ರೇವಣೇಶ. ಬಿ. ಕಾಲ್‌ತಿಪ್ಪಿ, ತೇರದಾಳ
೫೨. ಅಲ್ಲಪ್ಪ ಮುಕುಂದ, ತೇರದಾಳ
೫೩. ನಾಗಪ್ಪ ಕರೆಪ್ಪ ಧರೆಪ್ಪನವರು, ಶೇಗುಣಸಿ

ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಗಣ್ಯರಿಗೆ ಸತ್ಕಾರ

೧. ಶರಣ. ಬಿ.ಎಸ್. ಪಾಟೀಲ
(ಮಹಾಪೌರರು, ಹುಬ್ಬಳ್ಳಿ - ಧಾರವಾಡ ಮಹಾನಗರಪಾಲಿಕೆ)
೨. ಶರಣ. ಸಿದ್ದಪ್ಪ
(ಮಹಾಪೌರರು, ಮೈಸೂರು ಮಹಾನಗರಪಾಲಿಕೆ)
೩. ಶರಣ. ಬಸವರಾಜ ಯಾಲಕ್ಕಿ
(ಮಹಾಪೌರರು, ಗುಲ್ಬರ್ಗಾ ಮಹಾನಗರ ಪಾಲಿಕೆ)
೪. ಶರಣ. ಬಸವ ಕುಮಾರ್ ಪಾಟೀಲ, ಬೀದರ
(ಪಥ ಸಂಚಲನ, ರ‍್ಯಾಲಿ ಸಂಘಟನೆಗಾಗಿ)
೫. ಶರಣ. ಡಿ.ಎಸ್. ವಿಜಯಕುಮಾರ್, ಶಿವಮೊಗ್ಗ
(ಬಸವ ಕಿರಣ ಪತ್ರಿಕಾ ಪ್ರಕಟಣೆಗಾಗಿ)
೬. ಶರಣ. ಡಾ॥ ಬಸವರಾಜ ಲಿಗಾಡೆ
(ತಜ್ಞ ವೈದ್ಯರು, ಸೊಲ್ಲಾಪುರ)
೭. ಶರಣ. ಡಾ॥ ಮಲ್ಲಿಕಾರ್ಜುನ ಗುರುಪಾದಪ್ಪ ಹಂಜಿ,
(ಜನಪ್ರಿಯ ವೈದ್ಯರು, ಅಥಣಿ)

ಅಭಿನಂದನ ಕಾರ್ಯಕ್ರಮ

ಅಧ್ಯಕ್ಷತೆ : ಶರಣೆ. ಬಸವರಾಜೇಶ್ವರಿ
(ಲೋಕಸಭಾ ಸದಸ್ಯರು, ಬಳ್ಳಾರಿ)

ಉದ್ಘಾಟನೆ : ಶರಣ. ಸಿ.ಎಸ್. ನಾಡಗೌಡರು
(ಮಾಜಿ ಸಚಿವರು, ಮುದ್ದೇಬಿಹಾಳ)

ದೀಪಾಂಜಲಿ : ಶರಣೆ. ಸುವರ್ಣ ಸಿ.ಎಸ್. ನಾಡಗೌಡ

ಮುಖ್ಯ ಅತಿಥಿ : ಶರಣ. ರಾಜಶೇಖರ ಮಡಕಿ
(ಬಸವ ಸೆಂಟರ್, ಸೊಲ್ಲಾಪುರ)

ನುಡಿ ಕಾಣಿಕೆ : ಶರಣ. ಡಾ || ನಿತೀನಚಂದ್ರ ಹತ್ತೀಕಾಳ
(ರಾಜ್ಯಪ್ರಶಸ್ತಿ ವಿಜೇತರು, ಧಾರವಾಡ)
ಶರಣ. ಡಾ || ಸಿ.ಎಸ್. ಪುರಾಣಮಠ
(ದಂತವೈದ್ಯರು, ರಾಣೆಬೆನ್ನೂರು)
ಶರಣ. ಕರಿಬಸಪ್ಪ ಶಂಕರಪ್ಪ ಕೋರಿ
(ಬಸವ ಧರ್ಮಪ್ರಚಾರ ಸಂಸ್ಥೆ, ಬೆಳಗಾಲಪೇಟೆ)

ಉಪಸ್ಥಿತರಿರುವ ಗಣ್ಯರು :

ಶರಣ. ಶಿವಶಂಕರ ನಾಗಪ್ಪ ಕಾಡಾದಿ, ಸೊಲ್ಲಾಪುರ
ಶರಣ. ಎಸ್. ಶರಣಪ್ಪ, ಚಳ್ಳಕೆರೆ
ಶರಣ. ಎ.ಎಂ. ಬಸವೇಗೌಡರು, ಚಿಕ್ಕಮಗಳೂರು
ಶರಣ. ಎಂ.ಕೆ. ಮಲ್ಲಯ್ಯರಾಜ್, ಭವಾನಿ
ಶರಣ. ಆರ್.ಬಿ. ಹೆಬ್ಬಳ್ಳಿ, ಬಾಂಬೆ
ಶರಣ. ರಾಜಶೇಖರ ಮಹಾಜನ, ಅಥಣಿ
ಶರಣ. ಆರ.ಐ. ಕಲ್ಯಾಣಶೆಟ್ಟಿ, ಮುಧೋಳ
ಶರಣ. ಪರ್ವತಪ್ಪ ಕೋರವಾರ, ಹೈದರಾಬಾದ
ಶರಣ. ಸಿದ್ಧಯ್ಯ ಹೊಸಮಠ, ಮುಧೋಳ
ಶರಣ. ಜಿ.ಸಿ. ಚಿನಿವಾಲ ಶೆಟ್ಟರು, ಮುಧೋಳ
ಶರಣ. ಎಸ್. ಪುಟ್ಟಸಿದ್ಧಪ್ಪ, ಬೆಂಗಳೂರು
ಶರಣ. ವಿರೂಪಾಕ್ಷಪ್ಪ ಗಿರಿಸಾಗರ, ಜಮಖಂಡಿ
ಶರಣ. ರಾವ್‌ಸಾಹೇಬ ಬಾಪೂಸಾಹೇಬ ಕಿತ್ತೂರಕರ, ಗಡಹಿಂಗ್ಲಾಜ್
ಶರಣ. ವಿಲಾಸ ಶಂಕರಪ್ಪ ಬಾಗಿ, ಗಡಹಿಂಗ್ಲಾಜ್
ಶರಣ. ಜೆ. ರಾಜು, ಸಕಲಟ್ಟಿ, ತಮಿಳುನಾಡು
ಶರಣ. ಗುರುಬಸಪ್ಪ ಕಾಟೀರಿ, ತಮಿಳುನಾಡು
[illegible]

ಮಡಿವಾಳ ಮಾಚಯ್ಯನವರ ಕಾಲಜ್ಞಾನ

* ದಕ್ಷಿಣದ ಕೃಷ್ಣೆಗೆ ಕರೆವರಯ್ಯ ಜನ ನೆರೆವರಯ್ಯ
* ಪರಿಧಾವಿಯೆಂಬ ಕಟ್ಟಳೆಗೆ ಉಳಿದವರು ಬರುವರು
ಒಬ್ಬರುಳಿಯದ ಹಾಗೆ ನೆರೆದು ಕೂಡುವರು
ಆನಂದ ಕಡೆಯಾಟ ಜರಿಯಲು ಬೇಡ
ಶಿವನ ಡಂಗುರವೆಂದು ಕರವೆತ್ತಿ ಕೂಗಿ ||

ಷಟ್ಕೋನ ಬಸವ ಧ್ವಜಾರೋಹಣಕ್ಕೆ ಮೊದಲು ಸಂಕಲ್ಪ ಪೂರ್ವಕವಾಗಿ ಹಾಡಬೇಕಾದ ಗೀತೆ

ಕರ್ತನ ಸೃಷ್ಟಿಯೊಳ್ ಹುಟ್ಟಿಹ ನಾನು
ಕರ್ತಗೆ ನಿಷ್ಠೆಯಿಂ ವಂದಿಪೆನು || ಪ ||

ಬಸವನ ಸ್ಮರಿಸಿ ಲೋಕದ ಲೇಸಿಗೆ
ಪೈಜೆಯ ತೊಟ್ಟು ದುಡಿಯುವೆನು || ಅ.ಪ. ||

ಭಕ್ತಿಯ ಜಲದೊಳು ಮೈತೊಳೆಯುವೆನು
ಜ್ಞಾನದ ವಸ್ತ್ರವ ಧರಿಸುವೆನು ।
ದೀನದಲಿತರ ಸೇವೆಯ ಗೈಯಲು
ಗಂಧದೊಲ್ ಬಾಳನು ಸವೆಸುವೆನು || ೧ ||

ಮಾನವರೆಲ್ಲರು ದೇವನ ಮಕ್ಕಳು
ಎನ್ನುತ ಧ್ವಜವನು ಹಾರಿಪೆನು ।
ಗುರುಬಸವಣ್ಣನ ವಚನದ ಸೌರಭ
ಹರಡಲು ಕಂಕಣ ಕಟ್ಟುವೆನು || ೨ ||

ಧರ್ಮದ ಕವಚವ ಧರಿಸುವೆನು
ತತ್ತ್ವದ ಖಡ್ಗವ ಹಿಡಿಯುವೆನು
ಕರ್ತನ ಕಮ್ಮಟವಾದೀ ಜಗದೊಳು
ಕಲ್ಯಾಣ ರಾಜ್ಯವ ಕಟ್ಟುವೆನು || ೩ ||

ರಚನೆ : ಜಗದ್ಗುರು ಮಾತೆ ಮಹಾದೇವಿ

ಷಟ್ಕೋನ ಬಸವ ಧ್ವಜ ಆರೋಹಣ

ದಿ *13-1-1993* ಸುಪ್ರಭಾತದ *9-50* ಕ್ಕೆ

ಪೂಜ್ಯ ಶ್ರೀಮನ್ಮಹಾರಾಜ ನಿರಂಜನ
ಜಗದ್ಗುರು ಶ್ರೀ ಶ್ರೀ ಶಿವಮೂರ್ತಿ ಮುರುಘರಾಜೇಂದ್ರ
ಮಹಾಸ್ವಾಮಿಗಳು

ಶರಣ ಮೇಳ - ಉದ್ಘಾಟನಾ ಸಮಾರಂಭ

ಬುಧವಾರ, ದಿ 13-1-1993 ಬೆಳಿಗ್ಗೆ 10 ಗಂಟೆಗೆ

ದಿವ್ಯ ಸನ್ನಿಧಿ : ಪೂಜ್ಯ ಶ್ರೀಮನ್ ನಿರಂಜನ
ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮೀಜಿ
(ಮಹಾಮನೆ ಮಹಾಮಠ, ಕೂಡಲಸಂಗಮ)

ಉದ್ಘಾಟನೆ : ಶ್ರೀ ಮನ್ಮಹಾರಾಜ ನಿರಂಜನ ಜಗದ್ಗುರು ಶ್ರೀ ಶ್ರೀ ಶಿವಮೂರ್ತಿ
ಮುರುಘರಾಜೇಂದ್ರ ಮಹಾಸ್ವಾಮಿಗಳು
(ಬೃಹನ್ಮಠ, ಚಿತ್ರದುರ್ಗ)

ಪ್ರಸ್ತಾವನೆ : ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
(ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ)

ಮುಖ್ಯ ಅತಿಥಿ : ಶರಣ. ಬಿ.ಕೆ. ಗುಡದಿನ್ನಿ
(ಲೋಕಸಭಾ ಸದಸ್ಯರು, ಬಿಜಾಪುರ)

ಪುಸ್ತಕ ಬಿಡುಗಡೆ : ಶರಣ. ಶಂಭುಲಿಂಗಸ್ವಾಮಿ, ದರೂರು

ಪುಸ್ತಕ : 'ವಚನ ಸಂಗಮ

ಅಧ್ಯಕ್ಷತೆ : ಶರಣ. ಎಸ್.ಆರ್. ಕಾಶಪ್ಪನವರು
(ಶಾಸಕರು, ಹುನಗುಂದ)

ಸತ್ಕಾರ : ಶರಣ. ಬಿ.ಎಸ್. ಪಾಟೀಲ
(ಮೇಯರ್, ಹುಬ್ಬಳ್ಳಿ - ಧಾರವಾಡ ಮಹಾನಗರ ಸಭೆ)
ಶರಣ. ಸಿದ್ಧಪ್ಪ
(ಮೇಯರ್, ಮೈಸೂರು ಮಹಾನಗರ ಸಭೆ)
ಶರಣ. ಬಸವರಾಜ ಯಾಲಕ್ಕಿ
(ಮೇಯರ್, ಗುಲ್ಬರ್ಗಾ ಮಹಾನಗರ ಸಭೆ)

ವಿಶೇಷ ಆಹ್ವಾನಿತರು :

ಶರಣ. ಬಿ.ಎಸ್. ಪಾಟೀಲ, ಶಾಸಕರು, ಮನಗೂಳಿ
ಶರಣ. ಡಾ || ಎಂ.ಪಿ. ನಾಡಗೌಡರು, ಎಂ.ಎಲ್.ಸಿ, ಬಾಗಲಕೋಟೆ
ಶರಣ. ಆರ್.ಬಿ. ಚೌಧರಿ, ಶಾಸಕರು, ಸಿಂದಗಿ
ಶರಣ. ಆರ್.ಆರ್. ಕಲ್ಲೂರ, ಶಾಸಕರು, ಇಂಡಿ
ಶರಣ. ಮನೋಹರ ಐನಾಪುರ, ಶಾಸಕರು, ಬಳ್ಳೊಳ್ಳಿ
ಶರಣ. ಜಿ.ಜಿ. ಯಳ್ಳಿಗುತ್ತಿ ಶಾಸಕರು, ಬೀಳಗಿ
ಶರಣ. ಶಂಕರಪ್ಪ ಕೋರಿ, ತಾ. ಕಾಂಗ್ರೆ ಅಧ್ಯಕ್ಷರು

ಪ್ರಾರ್ಥನೆ : ರಾಷ್ಟ್ರೀಯ ಬಸವ ದಳ ಹುಬ್ಬಳ್ಳಿ - ಧಾರವಾಡ

ಶರಣ ಮೇಳ - ವಿಶ್ವ ಭಾವೈಕ್ಯತಾ ಗೋಷ್ಠಿ

ಬುಧವಾರ, ದಿ 13-1-1993 ಸಂಜೆ 4-30

ದಿವ್ಯ ಸನ್ನಿಧಿ : ಪೂಜ್ಯ ಶ್ರೀಮನ್ ನಿರಂಜನ
ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳು

ಅಧ್ಯಕ್ಷತೆ : ಪೂಜ್ಯ ಶ್ರೀ ಶಿವಕುಮಾರ ಮಹಾಸ್ವಾಮಿಗಳು
(ಶಿವಯೋಗಾಶ್ರಮ, ಮಡಿಕೆಶಿರೂರು)

ಪ್ರಸ್ತಾವನೆ : ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ಉದ್ಘಾಟನೆ : ಶರಣ. ಧರ್ಮಸಿಂಗ್ ನಾರಾಯಣಸಿಂಗ್
(ಸಮಾಜ ಕಲ್ಯಾಣ ಸಚಿವರು, ಕರ್ನಾಟಕ ಸರ್ಕಾರ)

ಮುಖ್ಯ ಅತಿಥಿ : ಶರಣ. ಆರ್ ಬಿ. ಹೆಬ್ಬಳ್ಳಿ
ಉದ್ದಿಮೆದಾರರು, ಮುಂಬಯಿ

ಪುಸ್ತಕ ಬಿಡುಗಡೆ : ಶರಣ. ಡಾ || ಭಗವಾನ್ ದಾಸ್ ತಿವಾರಿ, ಡಿ.ಲಿಟ್
(ಹಿಂದಿ ಸಾಹಿತ್ಯ ಸಂಶೋಧಕರು, ತತ್ವಭೂಷಣ, ಸೊಲ್ಲಾಪುರ)

ಪುಸ್ತಕ : ವಿಶ್ವವಿಭೂತಿ ಬಸವಣ್ಣ (ಮರಾಠಿ ಆವೃತ್ತಿ)

ಅನುವಾದಕರು : ಶರಣೆ. ಶಶಿಕಲಾ ಮಡಕಿ, ಸೊಲ್ಲಾಪುರ

ದಾನಿಗಳು : ಶರಣೆ. ಅನ್ನಪೂರ್ಣಮ್ಮ ಭತಗುಣಕಿ, ಸೊಲ್ಲಾಪುರ

ವಿಶೇಷ ಆಹ್ವಾನಿತರು :

ಶರಣ. ಎಂ.ಕೆ. ಪಟ್ಟಣಶೆಟ್ಟಿ, ಶಾಸಕರು, ಬಾದಾಮಿ
ಶರಣ. ಆರ್.ಎಂ. ಕಲೂತಿ, ಶಾಸಕರು, ಜಮಖಂಡಿ
ಶರಣ. ಎ.ಎಸ್. ಸರ್‌ನಾಯಕ, ಶಾಸಕರು, ಬಾಗಲಕೋಟೆ
ಶರಣ. ಮಂಜುನಾಥ ಕುನ್ನೂರು, ಶಾಸಕರು, ಶಿಗ್ಗಾಂವಿ
ಶರಣ. ಶರಣಬಸಪ್ಪ ಮಾಲಿ ಪಾಟೀಲ, ಶಾಸಕರು, ಆಳಂದ
ಶರಣ. ಸಿ.ಆರ್. ಸೋರಗಾಂವಿ, ಎಂ.ಎಲ್.ಸಿ. ಬಾಗಲಕೋಟೆ

ಪ್ರಾರ್ಥನೆ : ರಾಷ್ಟ್ರೀಯ ಬಸವ ದಳ, ಬೆಂಗಳೂರು
ಸ್ವಾಗತ : ಶರಣ. ವಿ.ವಿ. ಕೊರ್ಲಹಳ್ಳಿ, ಬಿ.ಇ. ಕೊಪ್ಪಳ.

ಶರಣಮೇಳ - ಮಹಿಳಾ ಗೋಷ್ಠಿ

ಬುಧವಾರ, 13-1-1993 **ರಾತ್ರಿ 7-30**

ಪ್ರಾರ್ಥನೆ :	ರಾಷ್ಟ್ರೀಯ ಬಸವ ದಳ, ತುಮಕೂರು
ಸ್ವಾಗತ :	ಶರಣೆ. ಶಶಿಕಲಾ ನಾಗರಾಜು, ಚಳ್ಳಕೆರೆ
ಉದ್ಘಾಟನೆ :	ಶರಣೆ. ಲೀಲಾದೇವಿ ರೇಣುಕ ಪ್ರಸಾದ (ಮಾಜಿ ಸಚಿವೆ ಮತ್ತು ಸಮಾಜ ನೇತಾರರು)
ಅಧ್ಯಕ್ಷತೆ :	ಶರಣೆ. ಶಶಿಕಲಾ ರಾಜಶೇಖರ ಮಡಕಿ (ಶರಣ ಸಾಹಿತಿ, ಸೊಲ್ಲಾಪುರ)
ಪುಸ್ತಕ ಬಿಡುಗಡೆ :	ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿ (ವಿಶ್ವಕಲ್ಯಾಣ ಮಿಷನ್, ಬೆಂಗಳೂರು)
ಪುಸ್ತಕ :	ಅಕ್ಕಮಹಾದೇವಿ ಅಮುದುವಾಕ್ಕು (ತಮಿಳು)
ಪಟ ಬಿಡುಗಡೆ :	ಶರಣೆ ಶಾರದಮ್ಮ ಭೀಮಲಿಂಗನಗೌಡ (ರಾಷ್ಟ್ರೀಯ ಬಸವ ದಳ, ಬಳ್ಳಾರಿ)
ಪಟ :	ದೇವ ಪೂಜಾ ಗೀತೆಗಳು
ಮುಖ್ಯ ಅತಿಥಿ :	ಶರಣೆ. ಮೋಟಮ್ಮ (ಶಾಸಕರು, ಮೂಡಿಗೆರೆ)
ಉಪನ್ಯಾಸಕರು :	ಶರಣೆ. ಅನ್ನಪೂರ್ಣ ಹಂಗರಗಿ, ಎಂ.ಎ.ಬಿ.ಎಡ್. (ಉಪನ್ಯಾಸಕಿ, ಬೀದರ್) ಶರಣೆ. ವಿಜಯಾ ನಂಜುಂಡಪ್ಪ ಎಂ.ಎ.ಬಿ.ಎಡ್. (ಪ್ರಿನ್ಸಿಪಾಲ್, ಮದಕರಿ ನಾಯಕ ಕಾಲೇಜು, ಚಿತ್ರದುರ್ಗ) ಶರಣೆ. ಶಾಂತಾ. ಎಸ್. ಪಾಟೀಲ ಎಂ.ಎ (ಪ್ರಿನ್ಸಿಪಾಲ್, ಜ್ಯೂ ಕಾಲೇಜ್, ಏನಾಪುರ)
ಸನ್ನಿಧಿ :	ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ (ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠ, ಧಾರವಾಡ)
ಸಭಾ ನಿರ್ವಹಣೆ :	ಶರಣೆ. ಗಂಗಾಂಬಿಕಾ ಪಾಟೀಲ, ಬೀದರ
ಮಾಲಾರ್ಪಣೆ :	ರಾಷ್ಟ್ರೀಯ ಬಸವ ದಳ, ಬಳ್ಳಾರಿ

ವೈಜ್ಞಾನಿಕ ಸಮ್ಮೋಹಿನಿ ಪ್ರಯೋಗ

ಶ್ರೀ ಬಸಯ್ಯ ಸ್ವಾಮಿ ಹಿರೇಮಠ ಇವರು ಅತ್ಯಾಶ್ಚರ್ಯಕರವಾದ ಪ್ರಯೋಗಗಳನ್ನು ಸಮ್ಮೋಹಿನಿ ಕ್ಷೇತ್ರದಲ್ಲಿ ಮಾಡುತ್ತಿದ್ದು ಅವರ ತಂತ್ರಗಳ ಪ್ರದರ್ಶನವನ್ನು ಏರ್ಪಡಿಸಲಾಗಿದೆ. ದಿ. 13-1-1993 ರಾತ್ರಿ 10 ರಿಂದ ಸುಮಾರು ಮುಕ್ಕಾಲು ಗಂಟೆ ಕಾಲ ನಡೆಯುವ ಈ ಪ್ರದರ್ಶನದಲ್ಲಿ ವೈವಿಧ್ಯಮಯವಾದ ರೀತಿಯಲ್ಲಿ ಪ್ರಯೋಗಗಳನ್ನು ಮಾಡಿ ತೋರಿಸುವರು.

ಗುರುವಾರ ದಿ. 14-1-1993

ಬಸವ ಕ್ರಾಂತಿ ದಿನದಂದು ಕೃಷ್ಣಾ- ಮಲಪ್ರಭಾ ನದಿಗಳ ದಿವ್ಯ ಸಂಗಮದಲ್ಲಿರುವ ಶ್ರೀ ಬಸವೇಶ್ವರ ಐಕ್ಯಮಂಟಪದಿಂದ, ಬೆಳಿಗ್ಗೆ 9 ಕ್ಕೆ ಹೊರಟು ಶರಣ ಬಂಧುಗಳು ಪಾದಯಾತ್ರೆ, ಪಥ ಸಂಚಲನದ ಮೂಲಕ ಬಸವ ವನದಲ್ಲಿರುವ ಸಭಾ ಮಂಟಪಕ್ಕೆ ಆಗಮಿಸುವರು. ಬಿಳಿಯ ಸಮವಸ್ತ್ರ ಉಟ್ಟು, ಕಾವಿಯ ಸ್ಕಾರ್ಫ್ ಹೊದ್ದು ಎಲ್ಲರೂ ಪಥ ಸಂಚಲನದಲ್ಲಿ ಭಾಗವಹಿಸಬೇಕು.

ಬಸವ ಧ್ವಜಾರೋಹಣ :

ಶರಣ ಮೇಳ - ಸಮುದಾಯ ಪ್ರಾರ್ಥನೆ

ಬಸವ ಕ್ರಾಂತಿ ದಿನಾಚರಣೆ ಮತ್ತು ಶ್ರೀ ಸಿದ್ಧರಾಮೇಶ್ವರ ಜಯಂತಿ

ಗುರುವಾರ : 14-1-1993 **ವೇಳೆ ಬೆಳಿಗ್ಗೆ 10-30**

ದಿವ್ಯ ಸನ್ನಿಧಿ :	ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮೀಜಿ
ಉದ್ಘಾಟನೆ :	ಶರಣ. ಭೀಮಣ್ಣ ಖಂಡ್ರೆ (ಸಾರಿಗೆ ಮಂತ್ರಿಗಳು, ಕರ್ನಾಟಕ ಸರ್ಕಾರ)
ಅಧ್ಯಕ್ಷತೆ :	ಶರಣ. ಜಸ್ಟೀಸ್ ಕೆ.ಬಿ. ನಾವದಗಿ (ನ್ಯಾಯಾಧೀಶರು, ಕರ್ನಾಟಕ ಉನ್ನತ ನ್ಯಾಯಾಲಯ)
ಪುಸ್ತಕ ಬಿಡುಗಡೆ :	ಶರಣ ಎಸ್.ಬಿ. ನ್ಯಾಮಗೌಡರು (ಕೇಂದ್ರ ಸಚಿವರು, ಕಲ್ಲಿದ್ದಲು ಖಾತೆ)
ಪುಸ್ತಕ :	'ವಿಶ್ವಗುರು ಬಸವಣ್ಣ'-ಜೀವನ ಚರಿತ್ರೆ
ಮುಖ್ಯ ಅತಿಥಿಗಳು :	ಶರಣ. ರಾಮಚಂದ್ರ ವೀರಪ್ಪ (ಲೋಕಸಭಾ ಸದಸ್ಯರು, ಬೀದರ್) ಶರಣ. ಸಿ.ಪಿ. ಮೂಡಲಗಿರಿಯಪ್ಪ (ಲೋಕಸಭಾ ಸದಸ್ಯರು, ಚಿತ್ರದುರ್ಗ)
ದೃಶ್ಯ - ಶ್ರಾವ್ಯ ಸುರುಳಿ ಬಿಡುಗಡೆ :	ಪೂಜ್ಯ ಶ್ರೀ ಜಯಚಂದ್ರಶೇಖರ ಸ್ವಾಮಿಗಳು (ಬಸವ ಮಂದಿರ, ಚಿಕ್ಕಮಗಳೂರು)
ವೀಡಿಯೋ ಕೆಸೆಟ್ಟು :	ಇಷ್ಟಲಿಂಗಾರ್ಚನಾ
ಅತಿಥಿಗಳು :	ಶರಣ. ಎಸ್.ಆರ್. ಕಾಶಪ್ಪನವರು, ಶಾಸಕರು ಹುನಗುಂದ

ಸಮುದಾಯ ಪ್ರಾರ್ಥನಾ ನಿರ್ವಹಣೆ :

೧. ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ, ಬೆಂಗಳೂರು
೨. ಪೂಜ್ಯ ಶ್ರೀ ಸದ್ಗುರು ಸದಾನಂದ ಪ್ರಭು ಸ್ವಾಮಿಗಳು, ಸಿರಗುಪ್ಪಿ
೩. ಪೂಜ್ಯ ಶ್ರೀ ಬಸವಲಿಂಗ ಪಟ್ಟಾಧ್ಯಕ್ಷರು, ಹಿರೇಮಠ, ಭಾಲ್ಕಿ
೪. ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿ, ಧಾರವಾಡ
೫. ಪೂಜ್ಯ ಶ್ರೀ ಶಿವಾನಂದ ಸ್ವಾಮಿಗಳು, ಹುಲ್ಸೂರು
೬. ಪೂಜ್ಯ ಶ್ರೀ ನಿ.ಪ್ರ ಜಗದ್ಗುರು ದೇವರು ಸ್ವಾಮಿಗಳು, ಮುಧೋಳ

ಉಪಸ್ಥಿತರಿರುವ ಪೂಜ್ಯರುಗಳು

ಪೂಜ್ಯ ಶ್ರೀ ನಿ.ಪ್ರ ಶಿವಲಿಂಗೇಶ್ವರ ಸ್ವಾಮಿಗಳು, ತೇರದಾಳ
ಪೂಜ್ಯ ಶ್ರೀ ಶಿವಕುಮಾರ ಮಹಾಸ್ವಾಮಿಗಳು, ಮಡಿಕೆಶಿರೂರು
ಪೂಜ್ಯ ಶ್ರೀ ಮಹಾಂತದೇವರು, ಯರಗಟ್ಟಿ
ಪೂಜ್ಯ ಶ್ರೀ ರುದ್ರಮುನಿ ದೇಶೀಕೇಂದ್ರ ಸ್ವಾಮಿಗಳು, ಮರೇಗುದ್ದಿ
ಪೂಜ್ಯ ಶ್ರೀ ಶ್ರೀಶೈಲ ಚನ್ನಮಲ್ಲಿಕಾರ್ಜುನ ಶಿವಾಚಾರ್ಯರು, ನಾಗಠಾಣ
ಪೂಜ್ಯ ಶ್ರೀ ಸಿದ್ಧಲಿಂಗದೇವರು, ರಾವೂರು

ವಿಶೇಷ ಆಹ್ವಾನಿತರು :

ಶರಣ. ಬಸವರಾಜ ಪಾಟೀಲ ಅಟ್ಟೂರು, ಬಸವ ಕಲ್ಯಾಣ
ಶರಣ. ಸು.ಶಿ. ನಾಗರಾಳೆ, ನ್ಯಾಯಾಧೀಶರು, ಯಾದಗಿರಿ
ಶರಣ. ಡಾ॥ ಜಿ.ಆರ್. ತಮಗೊಂಡ, ವೈದ್ಯಾಧಿಕಾರಿ, ಬಾಗಲಕೋಟೆ
ಶರಣ. ಎಂ.ಎಂ. ಗದಗ B.E. DIP. HSG DIP.T and CP
ಚೀಫ್ ಇಂಜಿನಿಯರ್, ಯು.ಕೆ.ಪಿ. ಆಲಮಟ್ಟಿ
ಶರಣ. ಮಲ್ಲಿಕಾರ್ಜುನ ದಿವಟರ, ಶಾಸಕರು, ಕೊಪ್ಪಳ
ಶರಣ. ಅಶೋಕ ಕಟ್ಟೀಮನಿ, ಎಂ.ಎಲ್.ಎ. ಬಾದಾಮಿ
ಶರಣ. ಹುಲ್ಲಪ್ಪ ವೈ. ಮೇಟಿ, ಶಾಸಕರು, ಗುಳೇದಗುಡ್ಡ
ಶರಣ. ಪಿ.ಸಿ. ಗದ್ದಿಗೌಡ, ಎಂ.ಎಲ್.ಸಿ. ಬದಾಮಿ

ಪ್ರತಿಜ್ಞಾವಿಧಿ, ಕುಸುರೆಳ್ಳಿನ ಹಂಚಿಕೆ, ಮಹಾಮಂಗಲಾಚರಣೆ

ಪ್ರಾರ್ಥನೆ : ರಾಷ್ಟ್ರೀಯ ಬಸವದಳ, ಚಳ್ಳಕೆರೆ
ಸ್ವಾಗತ : ಶರಣ. ಬಸವಕುಮಾರ ಪಾಟೀಲ, ಬೀದರ
ಮಾಲಾರ್ಪಣೆ : ರಾಷ್ಟ್ರೀಯ ಬಸವ ದಳ, ಚಿತ್ರದುರ್ಗ

ಶರಣ ಮೇಳ - ಮಕ್ಕಳ ಗೋಷ್ಠಿ

ದಿ. 14-1-1993, ಗುರುವಾರ ಮಧ್ಯಾಹ್ನ 4-30

ಪ್ರಾರ್ಥನೆ : ಕುಮಾರಿ ಬಸವಶ್ರೀ
ಸ್ವಾಗತ : ಕುಮಾರಿ ಶೋಭಾ, ಕೂಡಲ ಸಂಗಮ
ಉದ್ಘಾಟನೆ : ಕುಮಾರಿ ವಚನ ಸುಧಾ, ಚಿತ್ರದುರ್ಗ
ಮುಖ್ಯ ಅತಿಥಿ : ಕುಮಾರಿ ಪುನೀತಾ ನಂಜುಂಡಪ್ಪ, ದಾವಣಗೆರೆ
ನೃತ್ಯಾಭಿನಯ : ಕುಮಾರಿ ಶೃತಿ. ಕೆ.ಎಂ.ಭಟ್, ಸಿದ್ಧಾಪುರ
ಕುಮಾರಿ ಪುನೀತಾ ನಂಜುಂಡಪ್ಪ, ದಾವಣಗೆರೆ
ಕುಮಾರಿ ಆರತಿ ಅಡಕಿಹಾಳ, ಬಾಗಲಕೋಟ
ಕುಮಾರಿ ಕೆ.ಎಂ. ರೋಹಿಣಿ, ಕಂಪ್ಲಿ
ಸಮೂಹಗೀತೆ : ಗಂಗಾಂಬಿಕೆ, ಅರ್ಚನಾ, ಶೋಭಾ, ಬಸವಶ್ರೀ,
ಮಂಜುಳಾ, ಬಸವ ಚಂದ್ರಿಕೆ
ಉಪನ್ಯಾಸಗಳು : ಕುಮಾರಿ ಬಸವಶ್ರೀ, ಬೆಂಗಳೂರು
ಕುಮಾರಿ ಶೃತಿ ಕೆ. ಎಂ. ಭಟ್, ಸಿದ್ಧಾಪುರ
ಕುಮಾರಿ ಬಸವಶ್ರೀ ಶಿರಸಂಗಿ, ಧಾರವಾಡ
ಕುಮಾರಿ ಜ್ಯೋತಿ ಗಂಗಾಧರ, ಬಾಗಲಕೋಟೆ
ಅಕ್ಕ - ಪ್ರಭು ಸಂವಾದ :ಬಾಲ ಬಸವ ದಳ, ಕೊಪ್ಪಳ
ನಿರ್ವಹಣೆ : ಶರಣೆ. ಸರೋಜಮ್ಮ ಡಾ॥ ಸದಾಶಿವನಗೌಡ, ಚಿತ್ರದುರ್ಗ
ನಿರ್ದೇಶನ : ಶರಣೆ. ಜಯಮ್ಮ ಚಂದಪ್ಪ, ಶಿವಮೊಗ್ಗ

ಶರಣಮೇಳ - ರಾಷ್ಟ್ರೀಯ ಭಾವೈಕ್ಯತಾ

ದಿ. 14-1-1993 ಗುರುವಾರ **ಗೋಷ್ಠಿ** ಸಂಜೆ. 7-00

ದಿವ್ಯ ಸನ್ನಿಧಿ : ಪೂಜ್ಯ ಶ್ರೀಮನ್ ನಿರಂಜನ
ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳು
(ಚೇರ್ಮನ್, ವಿಶ್ವಕಲ್ಯಾಣ ಮಿಷನ್, ಬೆಂಗಳೂರು)
ಪೂಜ್ಯ ಶ್ರೀ ಸಿದ್ಧಲಿಂಗದೇವರು
(ಸಿದ್ಧಲಿಂಗೇಶ್ವರ ಮಠ, ರಾಪೂರು)
ಪ್ರಸ್ತಾವನೆ : ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಉದ್ಘಾಟನೆ : ಶರಣ. ಎಸ್.ಎಂ. ಕೃಷ್ಣ
(ವಿಧಾನ ಸಭಾ ಅಧ್ಯಕ್ಷರು, ಬೆಂಗಳೂರು)
ದೃಶ್ಯ - ಶ್ರಾವ್ಯ : ಶರಣ. ಬಿ.ಆರ್. ಪಾಟೀಲ
ಸುರುಳಿ ಬಿಡುಗಡೆ ಉಪಸಭಾಪತಿ, ವಿಧಾನ ಪರಿಷತ್ತು
ವಿಡಿಯೋ ಕೆಸೆಟ್ಟು : ಕ್ರಾಂತಿಯೋಗಿ ಬಸವಣ್ಣ - ಚಲನಚಿತ್ರ
ಮುಖ್ಯ ಅತಿಥಿಗಳು :ಶರಣ. ಜಿ. ಪುಟ್ಟಸ್ವಾಮಿ ಗೌಡರು
(ಮಾಜಿ ಆರೋಗ್ಯ ಸಚಿವರು, ಬೆಂಗಳೂರು)
ಶರಣ. ಎಂ.ಪಿ. ಉಸ್ತಾದ್
(ಮಾಜಿ ಸಚಿವರು, ಬಿಜಾಪುರ)
ಶರಣ. ವಿಶ್ವನಾಥ. ಚಾಕೋತೆ
(ಮಹಾಪೌರರು, ಸೊಲ್ಲಾಪುರ ಮಹಾನಗರಸಭೆ)

ವಿಶೇಷ ಆಹ್ವಾನಿತರು :

ಶರಣ. ಮನೋಹರ ತಹಸೀಲ್ದಾರ್, ಶಾಸಕರು, ಹಾನಗಲ್
ಶರಣ. ಎಂ.ಬಿ. ಪಾಟೀಲ, ಶಾಸಕರು, ಸಾಸನೂರು
ಶರಣ. ಬಿ.ಎಸ್. ಪಾಟೀಲ, ಶಾಸಕರು, ಹೂವಿನ ಹಿಪ್ಪರಗಿ
ಶರಣ. ಆರ್.ಬಿ. ತಿಮ್ಮಾಪುರ, ಶಾಸಕರು, ಮುಧೋಳ
ಶರಣ. ಎಸ್.ಎ. ಜಿದ್ದಿ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರು ಬಿಜಾಪುರ
ಶರಣ. ಡಾ॥ ಡಿ.ಆರ್. ಪಾಟೀಲ, ಶಾಸಕರು, ಗದಗ
ಪ್ರಾರ್ಥನೆ : ರಾಷ್ಟ್ರೀಯ ಬಸವ ದಳ, ಬೀದರ
ಸ್ವಾಗತ : ರಾಷ್ಟ್ರೀಯ ಬಸವ ದಳ, ಐಗಳಿ
ಸಭಾ ನಿರ್ವಹಣೆ : ಶರಣ. ಸಂಗಣ್ಣ ಅಥಣಿ

ರಾಷ್ಟ್ರೀಯ ಬಸವ ದಳಗಳ ಆರನೆಯ ಮಹಾಧಿವೇಶನ ಮತ್ತು ಶರಣಮೇಳ ಸಮಾರೋಪ ಸಮಾರಂಭ

ದಿ. 15-1-1993, ಶುಕ್ರವಾರ ಬೆಳಿಗ್ಗೆ: 10-30 ರಿಂದ 12-30

ಸನ್ನಿಧಿ : ಪೂಜ್ಯ ಶ್ರೀಮನ್ ನಿರಂಜನ
ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳು
ಪೂಜ್ಯ ಶ್ರೀ.ಸಿ.ಪ್ರ. ಶಿವಾನಂದ ಸ್ವಾಮಿಗಳು
(ಗುರು ಬಸವೇಶ್ವರ ಸಂಸ್ಥಾನಮಠ, ಹುಲ್ಸೂರು)

ಉದ್ಘಾಟನೆ : ಶರಣ. ಎಸ್.ಎಂ. ಯಾಹ್ಯಾ
(ಉನ್ನತ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ)

ಮುಖ್ಯ ಅತಿಥಿ : ಶರಣ. ರಾವ್ ಸಾಹೇಬ್ ಬಾಪೂ ಸಾಹೇಬ ಕಿತ್ತೂರಕರ್
(ಸಮಾಜ ನೇತಾರರು, ಗಡಹಿಂಗ್ಲಾಜ್)

ಪ್ರಾಸ್ತಾವಿಕ ಭಾಷಣ: ಶರಣ. ಬಸವಕುಮಾರ ಪಾಟೀಲ, ಬೀದರ್

ಉಪನ್ಯಾಸಕರು : ಪೂಜ್ಯ ಮ.ಘ.ಚ. ಬಸವಲಿಂಗ ಪಟ್ಟಾಧ್ಯಕ್ಷರು
ಪೂಜ್ಯ ಶ್ರೀ ಶಿವಯೋಗಿದೇವರು ಎಂ.ಎ. ಬಮ್ಮನಹಳ್ಳಿ
ಪೂಜ್ಯ ಶ್ರೀ ಶ್ರೀಶೈಲ ಮಲ್ಲಿಕಾರ್ಜುನ ಶಿವಾಚಾರ್ಯರು, ನಾಗಠಾಣ
ಶರಣೆ. ಸರೋಜಮ್ಮ ಎಂ. ನಾಗರಾಜು
(ರಾಷ್ಟ್ರೀಯ ಬಸವದಳ, ಮೈಸೂರು)
ಶರಣೆ. ಜಯಮ್ಮ ಚಂದ್ರಪ್ಪ
(ರಾಷ್ಟ್ರೀಯ ಬಸವದಳ, ಶಿವಮೊಗ್ಗ)
ಶರಣ. ಡಾ॥ ಕೆ.ಎಂ. ಕೋಣೇನ
(ಅಧ್ಯಕ್ಷರು, ಶಿವಾನುಭಾವ ಸಂಘ, ಘಟಪ್ರಭಾ)

ಸ್ವಾಗತ : ಶರಣ. ಡಿ.ಎಸ್. ವಿಜಯಕುಮಾರ್
(ಬಸವ ಕಿರಣ ಸಂಪಾದಕರು, ಶಿವಮೊಗ್ಗ)

ಮಾಲಾರ್ಪಣೆ : ರಾಷ್ಟ್ರೀಯ ಬಸವ ದಳ, ಜಮಖಂಡಿ ಮತ್ತು ಬೈಲಹೊಂಗಲ

ಮಹತ್ವಪೂರ್ಣ ನಿರ್ಣಯಗಳ ಘೋಷಣೆ - 12-45 ರಿಂದ

ಅಧ್ಯಕ್ಷತೆ : ಶರಣ. ಜಿ.ಬಿ. ಮಹಾಲಿಂಗಶೆಟ್ಟಿ, ಹುಬ್ಬಳ್ಳಿ

ಮಂಡನೆ : ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
(ಕಾರ್ಯಾಧ್ಯಕ್ಷೆ, ಬಸವ ಧರ್ಮ ಸಂಸತ್)

ಅನುಮೋದನೆ : ಶರಣ ಸಮುದಾಯದಿಂದ

ಘೋಷಣೆ : ಶರಣ ಸಮುದಾಯದ ಎದುರಿಗೆ

ವಿಶೇಷ ಸೂಚನೆ: ಈ ವೇದಿಕೆಯ ಮೇಲೆ ಮುಕ್ತ ಚರ್ಚೆಗೆ ಅವಕಾಶ ಇರುವುದಿಲ್ಲ ಮತ್ತು ಪ್ರಸ್ತುತ ಸಭೆಯಲ್ಲಿ ಘೋಷಿಸಲಾಗುವ ವಿಷಯಗಳನ್ನು ದಿ. 12-1-1993 ರಂದು ಬೆಳಿಗ್ಗೆ 10 ಗಂಟೆಗೆ ನಡೆಯುವ ಬಸವ ಧರ್ಮ ಸಂಸತ್ ಸಭೆಯಲ್ಲೇ ಚರ್ಚಿಸಲಾಗುವುದು. ಈ ಚರ್ಚಾ ಗೋಷ್ಠಿಯಲ್ಲಿ ಪಾಲ್ಗೊಳ್ಳಲು ಎಲ್ಲರಿಗೂ ಅವಕಾಶ ಇರುವುದರಿಂದ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಬೇಕೆನ್ನುವ ಶರಣರು ಆ ಗೋಷ್ಠಿಯಲ್ಲಿ

ಬಸವ ಜ್ಯೋತಿ ದರ್ಶನ

ಶುಕ್ರವಾರ ದಿ. 15-1-1993 ಬೆಳಿಗ್ಗೆ 8 ಗಂಟೆ

ಸಾಮೂಹಿಕ ಇಷ್ಟಲಿಂಗಪೂಜೆ

ಬಸವ ತತ್ವದ ಜೀವಾಳ ಕರ್ತನ ಆರಾಧನೆ; ಸೃಷ್ಟಿಕರ್ತನನ್ನು ವಿಶ್ವಾಕಾರದಲ್ಲಿ ಚುಳುಕಾಗಿಸಿಕೊಂಡು ಪೂಜಿಸುವುದು ಈ ಶಿವ ಪಥದ ಮುಖ್ಯ ಆಚರಣೆ. ಆದ್ದರಿಂದ ಪ್ರತಿವರ್ಷದಂತೆ ದಿ. 15-1-1993 ಶುಕ್ರವಾರದಂದು ಬೆಳಿಗ್ಗೆ 8 ಗಂಟೆಗೆ ಸಾಮೂಹಿಕ ಇಷ್ಟಲಿಂಗಾರ್ಚನೆ ಇರುತ್ತದೆ. ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಪೂಜೆಯನ್ನು ತೋರಿಸುವರು. ಅವರೊಡನೆ ಉಳಿದೆಲ್ಲ ಶರಣ - ಶರಣೆಯರು ಕುಳಿತುಕೊಂಡು ಇಷ್ಟಲಿಂಗಾರ್ಚನೆ ಮಾಡಬೇಕು. ಪೂಜಾ ಪರಿಕರಗಳನ್ನು ತೆಗೆದುಕೊಂಡು ಭಾಗಿಗಳಾಗಬೇಕು. ದಿನ ನಿತ್ಯ ಮಾಡುವ ಕ್ರಿಯೆ ಎಂದು ಉದಾಸೀನ ಮಾಡಬಾರದು. ಸಾಮೂಹಿಕ ತಪಸ್ಸಿನಲ್ಲಿ ಅದ್ಭುತ ಶಕ್ತಿಯಿದೆ. ಸಾಮೂಹಿಕ ಸಂಕಲ್ಪದಲ್ಲಿಯೇ ವ್ಯಕ್ತಿ ಮತ್ತು ಸಮಾಜಗಳಿಗೆ ಅಮೂಲ್ಯ ಭವಿಷ್ಯವಿದೆ. ನಂತರ ತೀರ್ಥಪ್ರಸಾದ ವಿತರಣೆ ಇರುವುದು.

ಇಷ್ಟಲಿಂಗಪೂಜಾ ವಿಧಾನವನ್ನು ಕಲಿಸುವ ದೇವಪೂಜಾ ವಿಧಾನದ ನೂತನ ಆವೃತ್ತಿ ಸಿದ್ಧವಾಗಿದ್ದು, ಬಿಡುಗಡೆಯಾಗಲಿದೆ. ಪೂಜೆಯಲ್ಲಿ ಭಾಗವಹಿಸುವ ಪ್ರತಿಯೊಬ್ಬರೂ ಈ ಪ್ರತಿ ಹೊಂದಿರಬೇಕು. ಇಷ್ಟಲಿಂಗಾರ್ಚನೆ ಕಲಿಸುವ ಆಡಿಯೋ ಕೆಸೆಟ್ಟು - ವಿಡಿಯೋ ಕೆಸೆಟ್ಟು ಎರಡೂ ಮಾರಾಟಕ್ಕೆ ಲಭ್ಯವಿರುತ್ತವೆ.

ಸಾಮೂಹಿಕ ಪೂಜಾನಂತರ ಬಸವ ಧರ್ಮದ ಮಹಾಜಗದ್ಗುರು ಪೀಠಾಧೀಶರು ಬಸವ ಜ್ಯೋತಿ ಉದ್ದೀಪನವನ್ನು ಮಾಡುವರು. ಧ್ವಜ ವಂದನೆಯನ್ನು ಸ್ವೀಕರಿಸುವರು. ಬಸವ ಜ್ಯೋತಿ ದರ್ಶನಾನಂತರ ಮಹಾಮಂಗಲಾಚರಣೆ.

ಸಾಂಸ್ಕೃತಿಕ ಕಾರ್ಯಕ್ರಮಗಳು

ಬೌದ್ಧಿಕ ಮತ್ತು ಅಧ್ಯಾತ್ಮಿಕ ಸಂಸ್ಕಾರ ನೀಡುವ ಉಪನ್ಯಾಸಗಳೊಡನೆ ಮನಸ್ಸನ್ನು ತಣಿಸುವ ಆರನೆಯ ಶರಣ ಮೇಳದಲ್ಲಿ ಏರ್ಪಾಡಾಗಿರುವ ಕೆಲವು ಸಾಂಸ್ಕೃತಿಕ ಕಾರ್ಯಕ್ರಮಗಳು ಹೀಗಿವೆ.

* ವಿವಿಧ ರಾಷ್ಟ್ರೀಯ ಬಸವ ದಳಗಳವರು ಪ್ರಾರ್ಥನೆ, ಮಂಗಲಗೀತೆಗಳನ್ನು ಹಾಡುವರು.
* 14-1-1993 ರ ಸಂಜೆ 4-30 ರಿಂದ ನಡೆಯುವ ಮಕ್ಕಳ ಗೋಷ್ಠಿಯಲ್ಲಿ ಅನೇಕ ಮಕ್ಕಳು ಭಾಗವಹಿಸಿ, ಹಾಡುವಿಕೆ, ನೃತ್ಯಾಭಿನಯ, ಉಪನ್ಯಾಸ ಮಾಡುವರು.
* ಅಥಣಿ ತಾಲ್ಲೋಕಿನ ಐಗಳಿಯ ಬಾಲಕರು ಶರಣ. ಕೂಡಲ ಸಂಗಮ ಉಮರಾಣಿ ಗುರುಗಳ ನೇತೃತ್ವದಲ್ಲಿ ಜನಪದ ಗೀತೆ ಹಾಡುವರು.
* ತಮಿಳುನಾಡಿನ ನೀಲಗಿರಿ ಜಿಲ್ಲೆಯ ಕಾಟೇರಿ ಗ್ರಾಮದ ಶರಣ. ಗುರುಬಸಪ್ಪನವರ ನೇತೃತ್ವದಲ್ಲಿ ಆರ್. ಚಂದ್ರಶೇಖರ, ಸುಬ್ರಹ್ಮಣ್ಯಂ, ಬಸವನಗರ (ಸಕಲಟ್ಟಿ ಗ್ರಾಮ), ಮನೋಹರ ಕೂನೂರು, ಡಾ॥ ಹಾಲ್‌ದೊರೈ, ಕೊಯಮತ್ತೂರು ಇವರು ವಿಶೇಷವಾದ ಭಜನೆಗಳನ್ನು ಮಾಡಲಿರುವರು; ಹಾಗೂ ತಮ್ಮ ಜಾನಪದ ವೇಷಗಳೊಡನೆ ಬಸವ ಸ್ತುತಿಯನ್ನು ಮಾಡಲಿರುವರು.
* ಪ್ರತಿಭಾವಂತ ಬಾಲಕಿ ಕುಮಾರಿ ಶೃತಿ ಕೆ.ಎಂ. ಭಟ್ ಹಿಂದಿನ ವರ್ಷಗಳಂತೆ ಈ

* ಜಗದೀಶ ಹಾಗಲವಾಡಿ, ಕಟ್ಟೀಮನಿ ಮತ್ತು ಮಲ್ಲಿಕಾರ್ಜುನ ಬೆಂಗಳೂರು ಇವರು ವಿಶೇಷ ಯೋಗಾಸನಗಳ ಪ್ರದರ್ಶನ ನೀಡುವರು ಮತ್ತು ಆಸಕ್ತರಿಗೆ ಪ್ರಾಣಾಯಾಮವನ್ನು ಕಲಿಸುವರು.

* ದಿನಾಂಕ 12-1-1993 ರಿಂದ 14-1-93 ರ ವರೆಗೆ ಪ್ರತಿನಿತ್ಯ ರಾತ್ರಿ. ಮಹಾಮನೆ ಮಹಾಮಠದ ಆವರಣದಲ್ಲಿ ರಾತ್ರಿ 10 ರಿಂದ ವೀಡಿಯೋ ಕೆಸೆಟ್ಟು ಪ್ರದರ್ಶನವಿರುತ್ತದೆ. ದಿ. 15-1-93 ರಂದು ಸಂಜೆ 7 ರಿಂದ ಕಾರ್ಯಕ್ರಮದ ಸಭಾಮಂಟಪದಲ್ಲಿ ಪ್ರದರ್ಶನವಿರುತ್ತದೆ.

ಶರಣ ಮೇಳ - ಕೆಲವು ವಿಶೇಷ ವಿವರಗಳು

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ಜಿಲ್ಲಾ ಕೇಂದ್ರ ಮತ್ತು ತಾಲ್ಲೋಕು ಕೇಂದ್ರಗಳಿಂದ ಬಸ್ಸುಗಳನ್ನು ಕೂಡಲ ಸಂಗಮದ ಯಾತ್ರಾರ್ಥಿಗಳಿಗಾಗಿ ಏರ್ಪಡಿಸಿದ್ದಾರೆ. (ಕ.ರಾ.ರ.ಸಾ. ಸಂಸ್ಥೆ ಕೇಂದ್ರ ಕಛೇರಿ ಆದೇಶ ಸಂಖ್ಯೆ ಬ.ವಿ : 186 : 6161 ದಿ. 3-12-1992) ಆದ್ದರಿಂದ ಸಂಬಂಧಪಟ್ಟ ವಲಯಗಳ ಡಿಪೋ ಮ್ಯಾನೇಜರನ್ನು ಕಂಡು ರಿಸರ್ವೇಶನ್‌ಗಾಗಿ ಕೇಳಿರಿ.

ಯಾವುದೇ ಕಡೆಯಿಂದ ಬರುವ ಪ್ರಯಾಣಿಕರಿಗೆ ಹುನಗುಂದ, ಇಳಕಲ್, ಬಾಗಿಲಕೋಟೆ, ಬಿಜಾಪುರಗಳಿಂದ ಸಂಪರ್ಕ ಬಸ್ಸುಗಳ ವ್ಯವಸ್ಥೆ ಮಾಡಲಾಗಿದೆ. ಬಾಗಿಲುಕೋಟೆಗೆ ರೈಲ್ವೆ ಮುಖಾಂತರ ಎರಡೂ- ದಿಕ್ಕಿನಿಂದ ಬರುವ ಯಾತ್ರಾರ್ಥಿಗಳಿಗೆ ರೇಲ್ವೆ ನಿಲ್ದಾಣದಲ್ಲಿ ಬಸ್ ವ್ಯವಸ್ಥೆ ಮಾಡಲಾಗುತ್ತಿದ್ದು ಇಳಿದವರು ನೇರವಾಗಿ ಕೂಡಲ ಸಂಗಮಕ್ಕೆ ಬರಬಹುದು.

ಕೂಡಲಸಂಗಮದಲ್ಲಿ ವಸತಿಗಾಗಿ ಶಾಮಿಯಾನ ಕೋಣೆಗಳ ವ್ಯವಸ್ಥೆ ಇದೆ. ಬಂದವರು ವಿಚಾರಣಾ ಕೇಂದ್ರದಲ್ಲಿ ಮಾಹಿತಿ ಪಡೆದು ವಸತಿಯ ಸೌಲಭ್ಯ ಪಡೆಯಬಹುದು. 100 ರೂ. ಪ್ರತಿನಿಧಿ ಶುಲ್ಕ 125 ರೂ. ಸದಸ್ಯತ್ವ ಶುಲ್ಕ: 100 ರೂ ಮತ್ತು ಹೆಚ್ಚು ಕಾಣಿಕೆ ಕೊಟ್ಟವರಿಗೆ ಮತ್ತು ಆಹ್ವಾನಿತರಿಗೆ ಊಟ, ವಸತಿಯ ವ್ಯವಸ್ಥೆಯನ್ನು ಸಮಿತಿಯು ಮಾಡುತ್ತದೆ.

ಉಚಿತ ದಾಸೋಹದ ಸೌಲಭ್ಯವು ಬೇಕಾದವರು ಸಹ ಕಾರ್ಯಾಲಯದಲ್ಲಿ ತಮ್ಮ ವಿವರ ನೀಡಿ ಗುರುತಿನ ಚೀಟಿ (ಬ್ಯಾಡ್ಜ್) ಪಡೆದುಕೊಳ್ಳಿರಿ.

ಸಾರ್ವಜನಿಕ ಕಾರ್ಯಕ್ರಮಗಳು 15-1-1993 ರಂದು ಮಧ್ಯಾಹ್ನ 3 ಗಂಟೆಗೆ ಮುಕ್ತಾಯಗೊಳ್ಳುವ ಕಾರಣ, ಆನಂತರ ಶರಣ ಬಂಧುಗಳು ತಮ್ಮ ತಮ್ಮ ಊರುಗಳಿಗೆ ಹಿಂದಿರುಗಬಹುದು.

ಕೇವಲ ಉತ್ಸವ ಸಮಿತಿಯ ಪದಾಧಿಕಾರಿಗಳು ಮತ್ತು ಮುಂದೆ ಸಂಘಟನೆ ಮಾಡಬೇಕೆನ್ನುವ ಉತ್ಸಾಹಿಗಳು, ಮುಖಂಡರು ಉಳಿದುಕೊಳ್ಳಬೇಕು. ಈ ಬಗ್ಗೆ ವಿಶೇಷ ಕಾರ್ಯಕರ್ತರ ಸಭೆಯು ದಿ. 15-1-1993 ರಂದು ಸಂಜೆ 6 ರಿಂದ ಮಹಾಮನೆ ಆವರಣದಲ್ಲಿ ನಡೆಯಲಿರುವುದು..

ದಿ. 16-1-1993 ಶನಿವಾರ ಬೆಳಿಗ್ಗೆ 8 ಗಂಟೆಗೆ ವಿಶೇಷ ಪೂಜೆ, ಅಖಂಡ ವಚನ ಪಠಣ ಮುಕ್ತಾಯ, ಮಹಾಮಂಗಲ, ಧ್ವಜಾವರೋಹಣ ಕಾರ್ಯಕ್ರಮ.

ಅನೇಕ ಸದ್ಭಕ್ತರು ದೀಕ್ಷೆಯನ್ನು ಪಡೆದುಕೊಳ್ಳಲು ಬಯಸಿ ಪತ್ರ ಬರೆದಿರುವುದರಿಂದ 16-1-1993 ರಂದು ಬೆಳಿಗ್ಗೆ 9 ಗಂಟೆಗೆ ದೀಕ್ಷಾ ಸಂಸ್ಕಾರ ನೀಡಲಾಗುವುದು. ಮಂತ್ರದೀಕ್ಷೆ, ಲಿಂಗದೀಕ್ಷೆ ಪಡೆಯಲಿಚ್ಛಿಸುವ ಉಭಯತರೂ ಮೊದಲೇ

ಕೂಡಲ ಸಂಗಮದಲ್ಲಿ ಸಂದರ್ಶಿಸಬೇಕಾದ ಸ್ಥಳಗಳು

ಸಂಗಮೇಶ್ವರ ದೇವಾಲಯ	:	ಚಾರಿತ್ರಿಕ, ಪುರಾತನ, ಶಿವ ದೇವಾಲಯ.
ಬಸವೇಶ್ವರ ಐಕ್ಯ ಮಂಟಪ	:	ಗುರು ಬಸವಣ್ಣನವರ ದಿವ್ಯ ಸಮಾಧಿ.
ಬಸವ ಸಾಗರ	:	ಕೃಷ್ಣ - ಮಲಾಪಹಾರಿ ನದಿಗಳ ಸಂಗಮದಿಂದ ರೂಪುಗೊಂಡಿರುವ ಸುಂದರ ಜಲರಾಶಿ.

ಅಖಂಡ ವಚನ ಪಠಣ ಮಂಟಪ :
ಬಸವ ಧರ್ಮ ಪೀಠದ ಮಹಾಮನೆಯ ಆವರಣದಲ್ಲಿ ದಿನಾಂಕ 9-1-1993 ರಿಂದ 16-1-93 ರವರೆಗೆ ಅಖಂಡ ವಚನ ಪಠಣ ನಡೆಯುತ್ತಿರುವ ಮಂಟಪ, ಮತ್ತು 16 ಜನ ಶರಣರ ಸುಂದರ ಮೂರ್ತಿಗಳು.

ಶ್ರೀ ಬಸವೇಶ್ವರ ಪೂಜಾಮಂಟಪ : ಮಹಾಮನೆಯ ಆವರಣದಲ್ಲಿರುವ ಇಲ್ಲಿಗೆ ಬಂದು ಪೂಜೆ ಮಾಡಿಸಿ, ದರ್ಶನ ಪಡೆದು, ತೀರ್ಥ ಪ್ರಸಾದವನ್ನು ಪಡೆಯಿರಿ.

ಬಸವ ಮುದ್ರೆ ಮತ್ತು ನಾಣ್ಯ : ಪೂಜ್ಯ ಗುರು ಬಸವಣ್ಣನವರ ಚಿತ್ರ, ಷಟ್ಕೋನ, ಬಸವ ಮಂತ್ರ ಪಾದಪೀಠ ಸಹಿತ ಇರುವ ಮುದ್ರೆಗಳು ದೊರೆಯುತ್ತವೆ. ಖರೀದಿಸಿ ಶ್ರೀ ಬಸವೇಶ್ವರ ಪೂಜಾಮಂಟಪದಲ್ಲಿ ಶುದ್ಧಿ ಮಾಡಿಸಿಕೊಳ್ಳಬಹುದು.

ನೀಲಾಂಬಿಕಾ ಐಕ್ಯ ಮಂಟಪ : ನೀಲಾಂಬಿಕಾ ತಾಯಿಯ ಸಮಾಧಿಯು ಕೃಷ್ಣಾ ನದಿಯ ಇನ್ನೊಂದು ಬದಿಗೆ, ತಂಗಡಗಿ ಗ್ರಾಮದ ಬಳಿ ಇದ್ದು ಅತ್ಯಂತ ಸುಂದರ ಪರಿಸರದಲ್ಲಿದೆ. ದೋಣಿಯಲ್ಲಿ ಕುಳಿತು ಪಯಣಿಸಲು ಅವಕಾಶವುಂಟು. ಮಲಪ್ರಭಾ ನದಿಯನ್ನು ದೋಣಿಯಲ್ಲಿ ದಾಟಿ ಬಸ್ಸುಗಳಲ್ಲಿಯೂ ಹೋಗಬಹುದು. ಅಥವಾ ಬಸ್ಸು ಕಾರುಗಳ ಮೂಲಕ ಬೆಳಗಲ್ ಮಾರ್ಗವಾಗಿ ಹೋಗಬಹುದು. ಕೂಡಲ ಸಂಗಮದಿಂದ ವಿಶೇಷ ಬಸ್ಸುಗಳಿರುತ್ತವೆ.

ಅತ್ಯಮೋಘವಾದ ವೀಡಿಯೋ ಕೆಸೆಟ್ಟುಗಳು : ಬಸವ ಧರ್ಮಪೀಠ ಟ್ರಸ್ಟ್ ಮತ್ತು ವಿಶ್ವಕಲ್ಯಾಣ ಮಿಶನ್ ಟ್ರಸ್ಟ್‌ಗಳ. ಜಂಟಿ ಪ್ರಯತ್ನದ ಫಲವಾಗಿ ಅಮೋಘವಾದ ವೀಡಿಯೋ ಕೆಸೆಟ್ಟು ಸಿದ್ಧವಾಗಿವೆ. 1. ಗುರುದರ್ಶನ - ಪೀಠಾರೋಹಣ - ಶರಣಮೇಳ (250) 2. ಹಿಂದುತ್ವ - ಲಿಂಗಾಯತ ಧರ್ಮದ ಸ್ಥಾನ (250 ರೂ) 3. ಪುನರ್ಜನ್ಮ ಸಿದ್ಧಾಂತ (200ರೂ) 4. ವಿಶ್ವಗುರು ಬಸವಣ್ಣನವರ ಸಮಗ್ರ ಜೀವನ (250 ರೂ) 5. ಕ್ರಾಂತಿಯೋಗಿ ಬಸವಣ್ಣ ಚಲನಚಿತ್ರ (250 ರೂ) 6. ಇಷ್ಟಲಿಂಗಾರ್ಚನಾ (250 ರೂ) ಇವನ್ನು ಖರೀದಿಸಿ, ನೋಡಿರಿ ಮತ್ತು ಇತರರಿಗೂ ತೋರಿಸಿ, ಧರ್ಮಪ್ರಸಾರ ಕಾರ್ಯದಲ್ಲಿ ನೆರವಾಗಿರಿ.

ಸೂಚನೆಗಳು
ಬಸವ ಧರ್ಮ ಪೀಠದ ಮಹಾಮನೆಯ ಆವರಣದಲ್ಲಿ ಶರಣ ಮೇಳ ಉತ್ಸವ ಸಮಿತಿಯ ಕಾರ್ಯಾಲಯ ಮತ್ತು ಸಮಾಚಾರ ಕೇಂದ್ರಗಳಿವೆ. ಪ್ರತಿನಿಧಿಗಳು ತಮ್ಮ ತಮ್ಮ ರಸೀತಿಗಳನ್ನು ತೋರಿಸಿ ಬ್ಯಾಡ್ಜಸ್ (ಗುರುತಿನ ಚೀಟಿ), ಪ್ರಸಾದ ನಿಲಯದ ಪ್ರವೇಶ ಚೀಟಿ ಮುಂತಾದುವನ್ನು ಪಡೆಯಬೇಕು.

ಕಾಣಿಕೆ ಸಂಗ್ರಹಿಸಲು ರಸೀತಿ ಪುಸ್ತಕ ಪಡೆದವರು ತಾವು ಸಂಗ್ರಹಿಸಿದ ಕಾಣಿಕೆ ಮತ್ತು ರಸೀತಿ ಪುಸ್ತಕಗಳನ್ನು ಕಾರ್ಯಾಲಯದಲ್ಲಿ ಇರುವ ಕೋಶಾಧ್ಯಕ್ಷೆ ಪೂಜ್ಯ ಶ್ರೀ ಮಾತೆ ಗಂಗಾದೇವಿಯವರಿಗೆ ಮತ್ತು ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಎಸ್. ಪುಟ್ಟರುದ್ರಪ್ಪ ಮತ್ತು ಕಲ್ಲಪ್ಪ, ಪರಮಾದಿ ಅವರಿಗೆ ಒಪ್ಪಿಸಿ, ಅವರ ಸಹಿ ಇರುವ ಪಾವತಿ

ಶರಣ ಮೇಳ ಕುರಿತು ಮತ್ತಷ್ಟು ವಿವರ

೧. 1993 ರ ನೂತನ ವರ್ಷದ ಕ್ಯಾಲೆಂಡರ್, ಭಕ್ತಿಶ್ರೀ, ಬಸವ ಚಂದ್ರಿಕೆ, ಶರಣ ಸೌರಭ ಇತ್ಯಾದಿ ಪೂಜ್ಯ ಮಾತಾಜಿಯವರು ಬರೆದ ಭಕ್ತಿಗೀತೆಗಳ ಕ್ಯಾಸೆಟ್ಟು 'ಬಸವ ಭಾನು' ಎನ್ನುವ ಬಸವಣ್ಣನವರ ಸಮಗ್ರ ಜೀವನ ಚರಿತ್ರೆ ಕುರಿತಾದ ಹಾಡಿನ ಕ್ಯಾಸೆಟ್ಟು 'ಬಿಡುಗಡೆಯಾಗಿದ್ದು ಮಾರಾಟಕ್ಕೆ ಲಭ್ಯವಾಗಲಿವೆ.

೨. ಕಾರ್ಯಕ್ರಮದಲ್ಲಿ ಭಾಗಿಗಳಾಗಬೇಕಾದವರು ಹೊದ್ದುಕೊಳ್ಳಲು ಷಟ್‌ಕೋನ ಸಹಿತವಾದ ಮೇಲುವಸ್ತ್ರ (ಸ್ಕಾರ್ಫ್) ಇದೆ. 12 ರೂ. ಗಳಿಗೊಂದರಂತೆ ಲಭ್ಯವಿರು ಇವನ್ನು ತಪ್ಪದೇ ಖರೀದಿಸಿ ಉಪಯೋಗಿಸಬೇಕು. ಬಸವಣ್ಣನವರ ಭಾವಚಿತ್ರ, 4 ಮೂಲೆ ಚಿತ್ರಗಳೊಡನೆ ಇರುವ ಪೂಜಾವಸ್ತ್ರದ ಬೆಲೆ 60 ರೂ. ನಿತ್ಯಪೂಜೆಯ ಕಾಲದಲ್ಲಿ ಹೊದೆಯಲು ಚೆನ್ನಾಗಿರುವುದು. ಮಹಾಮನೆ ಆವರಣ, ಸಭಾ ಮಂಟಪ ಎರಡೂ ಕಡೆ ಇವು ದೊರೆಯುತ್ತವೆ.

೩. ಶರಣ ಮೇಳದಲ್ಲಿ ಭಾಗಿಗಳಾದವರು ಮನೆಗೆ 'ಬಸವ ಪ್ರಸಾದ'ವಾಗಿ ಒಯ್ಯಲು 'ಲಾಡು' ಮತ್ತು ಕುಸುರೆಳ್ಳಿನ ಪೊಟ್ಟಣ ಮಾರಾಟಕ್ಕಿವೆ. ಸಭಾಮಂಟಪದ ಬಳಿ ಇರುವ ಅಂಗಡಿಯಲ್ಲಿ ಅವು ದೊರೆಯುತ್ತವೆ.

೪. ಪೂಜ್ಯ ಶ್ರೀ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು ಮತ್ತು ಪೂಜ್ಯ ಮಾತಾಜಿಯವರು ಮಾಡಿರುವ ಪ್ರವಚನಗಳ ಆಡಿಯೋ ಕ್ಯಾಸೆಟ್ಟು, ಭಕ್ತಿಗೀತೆಗಳ ಆಡಿಯೋ ಕ್ಯಾಸೆಟ್ಟು ಮತ್ತು ವೀಡಿಯೋ ಕ್ಯಾಸೆಟ್ಟು ಮಾರಾಟಕ್ಕೆ ಲಭ್ಯವಿರುತ್ತವೆ.

೫. ಪೂಜ್ಯ ಗುರುಗಳ ಪೀಠಾರೋಹಣ ಸಂದರ್ಭದಲ್ಲಿ ಹೂಮಾಲೆಗಳ ಅರ್ಪಣೆ ಮಾಡಬೇಕೆಂಬ ಸದ್ಭಕ್ತರಿಗಾಗಿ ಹೂವಿನ ಅಂಗಡಿಯನ್ನು ಚಳ್ಳಕೆರೆಯ ಮಲ್ಲಿಕಾರ್ಜುನಪ್ಪ ತೆರೆಯಲಿದ್ದು, ಹೂಮಾಲೆಗಳು ಮಾರಾಟಕ್ಕೆ ದೊರೆಯುತ್ತವೆ. ಅಪೇಕ್ಷೆಯುಳ್ಳವರು ಮೊದಲಿಗೇ ಪತ್ರ ಬರೆದು ತಮ್ಮ ಬೇಡಿಕೆ ಸಲ್ಲಿಸಬಹುದು.

೬. ಸಮುದಾಯ ಪ್ರಾರ್ಥನಾ ಪುಸ್ತಕ 'ವಚನ ಸಂಗಮ'ದ ಬೆಲೆ ೮ ರೂ. ಕೊಂಡು ಇಟ್ಟುಕೊಳ್ಳಬೇಕು ಮತ್ತು ಪ್ರಾರ್ಥನೆಗೆ ಬರುವಾಗ ತರಬೇಕು. ವಚನ ಸಂಗಮ ಪುಸ್ತಕದ ತೆಲುಗು, ತಮಿಳು ಮತ್ತು ಮರಾಠಿಯ ಅನುವಾದಗಳೂ ಇವೆ.

೭. ವಿಶ್ವಕಲ್ಯಾಣ ಮಿಷನ್‌ರವರ ಪ್ರಕಟಣೆಗಳೇ ಅಲ್ಲದೆ ಇನ್ನೂ ಬೇರೆ ಬೇರೆ ಪ್ರಕಾಶನ ಸಂಸ್ಥೆಗಳವರ ಪುಸ್ತಕಗಳೂ, ಧಾರ್ಮಿಕ ವಸ್ತುಗಳು ಮಾರಾಟಕ್ಕಿವೆ.

ಶರಣ ಮೇಳ ಉತ್ಸವ ಸಮಿತಿಯ ಹೊಣೆಯು ತೀರಾ ಹಿರಿದಾಗಿರುತ್ತದೆ. ಇದನ್ನು ವರ್ಷದಿಂದ ವರ್ಷಕ್ಕೆ ಸುವ್ಯವಸ್ಥಿತವಾಗಿ ವ್ಯಾಪಕವಾಗಿ ಬೆಳೆಸಬೇಕಾದರೆ ಜನರಿಂದ ಸ್ವಯಂ ಪ್ರೇರಣೆಯ ನೆರವು ಅಗತ್ಯ ಆದ್ದರಿಂದ ಸಹೃದಯರು ಉದಾರವಾಗಿ ದೇಣಿಗೆ ಕೊಟ್ಟು, ಸಹಕರಿಸಿ ಒಂದು ಮಾದರಿ ಕಾರ್ಯಕ್ರಮವನ್ನಾಗಿ ರೂಪಿಸಬೇಕೆಂದು ಕೋರುವೆವು.

ಕಾರ್ಯಾಧ್ಯಕ್ಷೆ : ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ಕೂಡಲ ಸಂಗಮ ಸ್ಥಳದ ಮಹತ್ವ ಮತ್ತು ನಿರ್ದೇಶನ

ಕೂಡಲ ಸಂಗಮವು ಬಿಜಾಪುರ ಜಿಲ್ಲೆಯ ಹುನಗುಂದ ತಾಲ್ಲೋಕದಲ್ಲಿ ಕೃಷ್ಣಾ-ಮಲಾಪಹಾರಿ ನದಿಗಳ ಸಂಗಮದಲ್ಲಿರುವ ಸುಕ್ಷೇತ್ರ.

ರಾಷ್ಟ್ರೀಯ ಹೆದ್ದಾರಿ ನಂ. 13 ಕ್ಕೆ ಕೇವಲ 7 ಕಿಲೋಮೀಟರ್ ದೂರದಲ್ಲಿದೆ. ಹುನಗುಂದದಿಂದ 22 ಕಿ.ಮಿ. ಆಲಮಟ್ಟಿಯಿಂದ 30 ಕಿ.ಮಿ. ಸಂಗಮ ಕ್ರಾಸಿನ ಬಳಿ ಉತ್ಸವ ಸಮಿತಿಯು ವಿಚಾರಣಾ ಕೇಂದ್ರವನ್ನು ಹೊಂದಿರುವುದು. ವಿವರಗಳು ಬೇಕಾದವರು ಇಲ್ಲಿ ಪಡೆಯಬಹುದು.

ಹುನಗುಂದ - ಇಳಕಲ್ - ಬಾಗಿಲಕೋಟೆ - ಬಿಜಾಪುರ ನಗರಗಳು ಕೂಡಲ ಸಂಗಮಕ್ಕೆ ಸನಿಹದಲ್ಲಿರುವ ಪ್ರಮುಖ ಪಟ್ಟಣಗಳು. ಈ ಸ್ಥಳಗಳಿಂದ ಕೂಡಲ ಸಂಗಮ ಕ್ಷೇತ್ರಕ್ಕೆ ಬಹಳಷ್ಟು ಸಾರಿಗೆ ಸಂಪರ್ಕ ವ್ಯವಸ್ಥೆ ಇದೆ.

ಪುರಾತನ ಶೈವ ಕ್ಷೇತ್ರವಾದ ಕೂಡಲ ಸಂಗಮವು 12 ನೆಯ ಶತಮಾನದ ಕಾಲದಲ್ಲಿ ಅತ್ಯಂತ ವೈಭವದ ಸ್ಥಿತಿಯಲ್ಲಿದ್ದು ಪ್ರಸಿದ್ಧ ಗುರುಕುಲವನ್ನು ಹೊಂದಿತ್ತು. ಗುರುಕುಲದ ಅಧಿಪತಿಗಳಾದ ಶ್ರೀ ಜಾತವೇದ ಮುನಿಗಳು ಬಹು ಖ್ಯಾತ ಯೋಗಿಗಳಾಗಿದ್ದರು.

ಸಮತಾವಾದಿ, ಕ್ರಾಂತಿಯೋಗಿ ಬಸವಣ್ಣನವರು ವಿದ್ಯಾರ್ಜನೆ ಮಾಡಿದ, ತಪಸ್ಸುಗೈದ, ನವಧರ್ಮ ದ್ರಷ್ಟಾರರಾದ ಮತ್ತು ಐಕ್ಯರಾದ ಸ್ಥಾನ ಕೂಡಲ ಸಂಗಮ.

ಈ ದಿವ್ಯ ಸಂಗಮವು ಒಂದು ದಂಡೆಗೆ ಬಸವಣ್ಣನವರ ಐಕ್ಯ ಮಂಟಪವನ್ನು, ಮತ್ತೊಂದು ದಂಡೆಗೆ ನೀಲಾಂಬಿಕಾ ತಾಯಿಯ ಐಕ್ಯಮಂಟಪವನ್ನು ಹೊಂದಿದೆ.

ಬಸವ ಧರ್ಮ ಪೀಠ ಟ್ರಸ್ಟ್ ಹತ್ತು ಎಕರೆ ಜಮೀನನ್ನು ಖರೀದಿಸಿ ಶ್ರೀ ಬಸವೇಶ್ವರ ಪೂಜಾ ಮಂಟಪ, ಅತಿಥಿ ಗೃಹ, ಶರಣರ ಮಂಟಪಗಳು ಮುಂತಾದುವನ್ನು ನಿರ್ಮಾಣ ಮಾಡುತ್ತಲಿದೆ.

೧೯೯೩ ನೆಯ ಜನವರಿ 12, 13, 14 ಮತ್ತು 15 ರಂದು ನಡೆಯಲಿರುವ ಶರಣ ಮೇಳಕ್ಕೆ ನಾಡಿನಾದ್ಯಂತದಿಂದ ಜನರು ಬರಲು ಅನುಕೂಲವಾಗುವಂತೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು (ಕಾಂಟ್ರಾಕ್ಟ್) ವಿಶೇಷ ಬಸ್ಸುಗಳನ್ನು ವ್ಯವಸ್ಥೆ ಮಾಡಿದೆ. ಮತ್ತು ರಾಷ್ಟ್ರೀಯ ಹೆದ್ದಾರಿ 13 ರ ಮೇಲೆ ಸಂಚರಿಸುವ ಬಸ್ಸುಗಳನ್ನು ನಿಲ್ಲಿಸಿ, ಮುಂದೆ ಹೋಗಲು ಸಾರಿಗೆ ಚಾಲಕರಿಗೆ ಆದೇಶ ನೀಡಿದೆ.

ಶರಣ ಮೇಳದ ಸಮಯದಲ್ಲಿ ಬಾಗಿಲಕೋಟೆಯವರೆಗೆ ಟ್ರೇನಿನಲ್ಲಿ ಬಂದು ಕೂಡಲ ಸಂಗಮಕ್ಕೆ ಬರಲು ಸಂಪರ್ಕ ಬಸ್ಸುಗಳ ಅನುಕೂಲತೆ ಇರುವುದು.

ದೂರವಾಣಿ : 325335

ಶರಣ ಮೇಳ ಉತ್ಸವ ಸಮಿತಿ, ಶಾಖೆಯ ಕಾರ್ಯಾಲಯ

ಬಸವಣ್ಣನವರ ವಚನಗಳಲ್ಲಿ ವ್ಯಂಗ್ಯ ವಿಡಂಬನೆ

-ಡಾ॥ ಬಸವರಾಜ ಸಬರದ

ವಾಚ್ಯಾರ್ಥಕ್ಕಿಂತ ವ್ಯಂಗ್ಯಾರ್ಥಕ್ಕೆ ಧ್ವನ್ಯಾರ್ಥಕ್ಕೆ ಕಾವ್ಯದಲ್ಲಿ ಮಹತ್ವದ ಸ್ಥಾನವಿದೆ. ಧ್ವನಿಯೇ ಕಾವ್ಯದ ಆತ್ಮವೆಂದು ಅಲಂಕಾರಿಕರು ಹೇಳಿದ್ದಾರೆ. ಹರಿತವಾದ ತೀವ್ರತೆಯೊಂದಿಗೆ ಧ್ವನ್ಯಾರ್ಥದತ್ತ ಸಾಗುವ ಅಭಿವ್ಯಕ್ತಿಯೇ ಉತ್ತಮ ವಿಡಂಬನೆಯಾಗುತ್ತದೆ. ವಿಡಂಬನೆಯ ಮೂಲ ಉದ್ದೇಶ ಮನಸ್ಸನ್ನು ಪರಿವರ್ತಿಸಬೇಕೇ ಹೊರತು, ಮನಸ್ಸನ್ನು ಕಲುಷಿತಗೊಳಿಸುವಂತಿರಬಾರದು. ಅದು ತನ್ನ ಹರಿತವಾದ ಗುಣದಿಂದ ತೀವ್ರ ಪರಿಣಾಮವನ್ನುಂಟು ಮಾಡಬೇಕೇ ಹೊರತು, ದ್ವೇಷವನ್ನು ಹುಟ್ಟಿಸುವಂತಿರಬಾರದು. ನಿಜವಾದ ವಿಡಂಬನೆ ಈ ಎರಡರ ನಡುವಿನ ಸತ್ಯವನ್ನು ಹೊಂದಿರುತ್ತದೆ. ವ್ಯಂಗ್ಯ - ವಿಡಂಬನೆಗಳು ಸಾಮಾಜಿಕ ಆರೋಗ್ಯ ಕಾಯುವಲ್ಲಿ ಹಿತಕರವಾಗಿರಬೇಕೇ ಹೊರತು ಸಮಾಜದ ಸ್ವಾಸ್ಥ್ಯವನ್ನು ಕೆಡಿಸುವಂತಿರಬಾರದು. ವಿಡಂಬನೆಗೆ ಅದ್ಭುತ ಶಕ್ತಿಯಿದೆ. ಆ ಸತ್ವಶೀಲಗುಣ ವಾಚ್ಯಾರ್ಥದಲ್ಲಿ ಸಾಧ್ಯವೇ ಇಲ್ಲ. ಹತ್ತು ಸಾಲುಗಳಲ್ಲಿ ಹೇಳಿದರೂ ಪರಿಣಾಮವಾಗದ ವಿಷಯವನ್ನು ಅದು ಒಂದೇ ಸಾಲಿನಲ್ಲಿ, ಒಂದೇ ಮಾತಿನಲ್ಲಿ ಹಿಡಿದಿಟ್ಟು ತೀವ್ರತೆಯನ್ನುಂಟು ಮಾಡುತ್ತದೆ. ಕಾವ್ಯದ ಯಶಸ್ಸಿನ ಮೂಲ ನೆಲೆಗಳಲ್ಲಿ ವಿಡಂಬನೆಯೂ ಒಂದು. ಆದರೆ ಕಾವ್ಯದಲ್ಲಿ ಶೃಂಗಾರಾದಿ ರಸಗಳಿದ್ದು ಪ್ರಾಮುಖ್ಯತೆ ವಿಡಂಬನೆಗಿಲ್ಲ. ಪ್ರಶ್ನಿಸುವ ಕ್ರಿಯೆಯೇ ನಿಷಿದ್ಧವಾಗಿರುವಂತಹ ಸಂದರ್ಭಗಳಿಲ್ಲ. ವಿಡಂಬನೆಗೆ ಪ್ರಾಶಸ್ತ್ಯ ಸಿಗಬಾರದು.

ವ್ಯಂಗ್ಯ - ವಿಡಂಬನೆಗಳಲ್ಲಿ ಚುರುಕು ಮುಟ್ಟಿಸುವ ಗುಣ ಇರುತ್ತದೆ. ಇದ್ದ ವ್ಯವಸ್ಥೆಯ ಬಗೆಗೆ, ವ್ಯಕ್ತಿಗಳ ಬಗೆಗೆ, ಮೌಲ್ಯಗಳ ಬಗೆಗೆ ಜಿಗುಪ್ಸೆಗೊಂಡು ಹೊಸ ವ್ಯವಸ್ಥೆಗಾಗಿ, ಹೊಸ ಆಶಯಗಳಿಗಾಗಿ ಹಾತೊರೆಯುವ ಧೈರ್ಯಶಾಲಿ ಕವಿಯಲ್ಲಿ ವ್ಯಂಗ್ಯ - ವಿಡಂಬನೆಗಳು ಸಹಜವಾಗಿ ಮೂಡಿ ಬರುತ್ತವೆ. ವ್ಯವಸ್ಥೆಯನ್ನು ಆರಾಧಿಸುವವರು ಅದನ್ನೆಂದಿಗೂ ಟೀಕಿಸಲಾರರು. ಬದುಕಿನ ಬೆಳವಣಿಗೆಗೆ ಈ ಟೀಕೆ - ವಿಡಂಬನೆಗಳು ತುಂಬಾ ಮುಖ್ಯವಾಗಿವೆ.

ಹರಿತವಾದ ವಿಡಂಬನೆ ಎಲ್ಲರಿಂದಲೂ ಸಾಧ್ಯವಿಲ್ಲ. ಅದು ಇನ್ನೊಬ್ಬರ ಮೇಲೆ ಪರಿಣಾಮವನ್ನುಂಟು ಮಾಡಬೇಕಾದರೆ, ವಿಡಂಬಿಸುವವನಲ್ಲಿ ನೈತಿಕ ಧೈರ್ಯವಿರಬೇಕಾಗುತ್ತದೆ. ತಾನೇ ತಪ್ಪು ಮಾಡಿದ ಮನುಷ್ಯ ಇನ್ನೊಬ್ಬರ ತಪ್ಪನ್ನು ಕಂಡು ವಿಡಂಬಿಸುವುದು ಹಾಸ್ಯಾಸ್ಪದವೆನಿಸುತ್ತದೆ. ತಾನು ಶುದ್ಧನಿರದೆ ಇತರರಿಗೆ ಉಪದೇಶಿಸುವವನ ವಿಡಂಬನೆ ವ್ಯರ್ಥಾಲಾಪವೆನಿಸುತ್ತದೆ.

ಬಸವೇಶ್ವರರದು ಒಬ್ಬ ಸಮಾಜ ಸುಧಾರಕನ ಮನಸ್ಸು ವ್ಯರ್ಥಾ. ಅಲ್ಲಿ [illegible]

ಬಸವೇಶ್ವರರಿಗೆ ಈ ಸಮಾಜ ವ್ಯವಸ್ಥೆಯ ಮೇಲೆ ಸಿಟ್ಟಿದೆ. ಇಲ್ಲಿಯ ಶೋಷಣೆ- ಮೌಢ್ಯತೆ ಅಂಧ ಸಂಪ್ರದಾಯಗಳನ್ನು ಕಂಡಾಗ ನೋವಾಗುತ್ತದೆ. ಧರ್ಮ- ದೇವರುಗಳ ಹೆಸರಿನಲ್ಲಿ ಮುಗ್ಧ ಜನತೆ ಬಲಿಯಾಗುತ್ತಿರುವುದನ್ನು ಕಂಡು ಗಾಢವಾದ ವಿಷಾದವಿದೆ. ಅಂತೆಯೇ ಅವರು ಸಮಾಜದಲ್ಲಿದ್ದು ಧರ್ಮ- ಜಾತಿ - ಜನತೆಯನ್ನು ಅವರ ಆಚಾರ ವಿಚಾರಗಳನ್ನು ಕುರಿತು ಹೇಳುವಾಗಲೆಲ್ಲಾ ತೀವ್ರವಾದ ವಿಡಂಬನೆಯನ್ನು ಮಾಡುತ್ತಾರೆ. ವ್ಯವಸ್ಥೆಯ ಸಾಂಕೇತಿಕ ಪ್ರತಿನಿಧಿಯೆಂದುಕೊಂಡು ತಮ್ಮನ್ನು ತಾವೇ ಮೊದಲು ವಿಡಂಬಿಸಿಕೊಳ್ಳುತ್ತಾರೆ. ಆದ್ದರಿಂದ ಅವರ ವಿಡಂಬನೆಗೊಂದು ನೈತಿಕ ಜವಾಬ್ದಾರಿಯಿದೆ. ಅವರ ವಿಡಂಬನೆಯಲ್ಲಿ ಭಕ್ತನ ಹೃದಯವಂತಿಕೆಯಿದೆ. ದಯೆಯ ಆರ್ತತೆಯಿದೆ. ಬದಲಾವಣೆಯ ಸಿದ್ಧತೆಯಿದೆ.

ಡಾಂಭಿಕತೆಯನ್ನು ಹೊಡೆದೋಡಿಸಿ ಸರಳತೆಯನ್ನು ತರುವ, ಮೌಢ್ಯತೆಯನ್ನು ಕಿತ್ತೊಗೆದು ಸಹಜತೆಯನ್ನು ಮೂಡಿಸುವ, ಭಯ - ಭೀತಿಗಳನ್ನು ತೊರೆದು ಮುಕ್ತ ವಾತಾವರಣವನ್ನುಂಟು ಮಾಡುವ, ಸ್ವಾರ್ಥ - ಸಣ್ಣತನಗಳನ್ನು ತೊರೆದು ಮಾನವೀಯತೆಯನ್ನು ಕಲಿಸುವ ಅವರ ವಿಚಾರಗಳು ವಿಡಂಬನಾತ್ಮಕವಾಗಿ ಬಂದಾಗಲೇ ಹೆಚ್ಚಿನ ಪರಿಣಾಮವನ್ನುಂಟು ಮಾಡುತ್ತವೆ. ಸಮಾಜ ಸುಧಾರಣೆಯ ಉತ್ಕಟೇಚ್ಛೆ ಅವರಲ್ಲಿ ಹೆಚ್ಚಾಗಿರುವದರಿಂದ, ಬಹುಪಾಲು ವಚನಗಳು ಸಮಾಜದ ಲೋಪ - ದೋಷಗಳನ್ನು ಕುರಿತು, ಸ್ಥಗಿತ ಮೌಲ್ಯಗಳನ್ನು ಕುರಿತು ವಿಡಂಬಿಸುತ್ತವೆ.

ವಿಡಂಬನೆಗಳಲ್ಲಿ ವ್ಯಕ್ತಿ ವಿಡಂಬನೆ, ಸಮಾಜ ವಿಡಂಬನೆ, ಸಂಸ್ಕೃತಿ ವಿಡಂಬನೆಯೆಂದು ಮೂರು ಭಾಗಗಳನ್ನು ಮಾಡಿಕೊಳ್ಳಬಹುದು. ಬಸವೇಶ್ವರರಲ್ಲಿ ವ್ಯಕ್ತಿ ವಿಡಂಬನೆಯಿಲ್ಲ, ಯಾವುದೇ ಒಬ್ಬ ವ್ಯಕ್ತಿಯ ಬಗೆಗೆ, ಒಂದು ಜಾತಿಯ ಬಗೆಗೆ ಅವರ ಸಿಟ್ಟಿರದೆ, ಅಂದಿನ ಸಮಾಜದ ಬಗೆಗೆ, ಸಂಸ್ಕೃತಿಯ ಬಗೆಗೆ, ಧರ್ಮಾಚರಣೆಯ ಬಗೆಗೆ, ಮೌಢ್ಯತೆಯ ಬಗೆಗೆ ಅವರಿಗೆ ಸಿಟ್ಟಿದೆ. ಆದರೆ ಆ ಸಿಟ್ಟು ಸೇಡಾಗುವುದಿಲ್ಲ. ಆರೋಗ್ಯಕರ ವಿಡಂಬನೆಯಾಗುತ್ತದೆ. ಅವರ ಸೆಡುವು ದ್ವೇಷವಾಗುವದಿಲ್ಲ. ಟೀಕೆಯ ಮೂಲಕ ಬೆಳೆಯಬಹುದಾದ ಆರೋಗ್ಯಕರ ಬದಲಾವಣೆಯಾಗುತ್ತದೆ. ಅವರ ವಿಡಂಬನೆ ಎಂದೂ ಮಾನವೀಯತೆಯ ಗೆರೆಗಳನ್ನು ದಾಟುವುದಿಲ್ಲ, ಅವರ ಟೀಕೆ ಎಂದೂ ವೈಮನಸ್ಸನ್ನುಂಟು ಮಾಡುವುದಿಲ್ಲ. ಅಲ್ಲಿ ಹೃದ್ಯತೆಯಿದೆ, ತೀವ್ರತೆಯಿದೆ, ಸರಳ ಮನಸ್ಸಿನ ಸಾತ್ವಿಕತೆಯಿದೆ.

ಅಂದಿನ ಜನತೆಯ ಮನದಲ್ಲಿದ್ದ ಮೌಢ್ಯತೆಯನ್ನು ಅಳಿಸಿ ಹಾಕುವುದು ಅವರ ಗುರಿಯಾಗಿತ್ತೇ ಹೊರತು, ಮೂಢರನ್ನು ನಾಶಗೊಳಿಸುವುದು ಅವರ [illegible]

ಅಂತೆಯೇ ಅವರ ವಿಡಂಬನೆಯಲ್ಲಿ ಚಲನಶೀಲತೆಯಿದೆ. ಸಮಾನತೆಯ ಆಶಯವಿದೆ. ಅಂದಿನ ಸಮಾಜ ವ್ಯವಸ್ಥೆಯಲ್ಲಿ ಕುಲದ ಹೆಸರಿನಲ್ಲಿ, ದೈವದ ಹೆಸರಿನಲ್ಲಿ ಧರ್ಮಾಚರಣೆಗಳ ಹೆಸರಿನಲ್ಲಿ ಅನೇಕ ಅತ್ಯಾಚಾರಗಳನ್ನು - ಶೋಷಣೆಗಳನ್ನು ಕಂಡು ಅವರು ಕನಲಿದಾಗ ವಿಡಂಬನೆ ಸಹಜವಾಯಿತು. ಅಲ್ಲಿಯ ಅಜ್ಞಾನ, ಹಿಂಸೆ, ಜಾತೀಯತೆಯ ಸ್ವಾರ್ಥಗಳನ್ನು ಕಂಡಾಗ ಅವರ ಮನಸ್ಸು ಜಾಗ್ರತವಾಗಿ ಟೀಕೆಯ ಮೂಲಕ ಅರಿವನ್ನು, ವಿಚಾರವನ್ನು ಜನತೆಯ ಮನಸ್ಸಿಗೆ, ಮರ್ಮಕ್ಕೆ ಮುಟ್ಟಿಸುವ ಕೆಲಸದಲ್ಲಿ ತೊಡಗಿತು. ಆದ್ದರಿಂದ ಅವರ ವಚನಗಳಲ್ಲಿ ವಿಡಂಬನೆಗಾಗಿ ವಿಡಂಬನೆಯಿರದೆ, ಸಮಾಜ ಪರಿವರ್ತನೆಯ, ಮನಸ್ಸು ಪರಿವರ್ತನೆಯ ಉದ್ದೇಶಕ್ಕಾಗಿ ವಿಡಂಬನೆಯಿದೆ.

ಬಸವೇಶ್ವರರ ವಚನಗಳಲ್ಲಿ ವಿಡಂಬನೆಯ ಜೊತೆ ವಿನೋದವು ಸೇರಿ ತೀವ್ರತರವಾದ ಪರಿಣಾಮವನ್ನುಂಟು ಮಾಡುತ್ತದೆ. ವಿವಿಧ ರೀತಿಯ ವಿನ್ಯಾಸಗಳಲ್ಲಿ ಬಿಚ್ಚಿಕೊಳ್ಳುವ ಅವರ ವಿಡಂಬನೆಯಲ್ಲಿ ಧ್ವನ್ಯಾರ್ಥಕ್ಕೆ ಪ್ರಧಾನ ಸ್ಥಾನವಿದೆ. ಒಮ್ಮೊಮ್ಮೆ ವಚನವೊಂದರ ಸಾಲಿನಲ್ಲಿ ಅದು ವ್ಯಕ್ತವಾದರೆ, ಕೆಲವೊಮ್ಮೆ ಇಡೀ ವಚನವೇ ವ್ಯಂಗ್ಯಾರ್ಥವಾಗಿ ವಿಡಂಬಿಸುತ್ತದೆ.

ವರ್ಣಾಶ್ರಮದ ಹೆಸರಿನಲ್ಲಿ ಸಮಾಜವನ್ನು ಒಡೆದು ತಮ್ಮ ಸುಖವನ್ನಷ್ಟೇ ನೋಡಿಕೊಂಡ ಸ್ವಾರ್ಥಿಗಳನ್ನು ಕಂಡು ಬಸವೇಶ್ವರರು ಹರಿತವಾಗಿ ವಿಡಂಬಿಸಿದ್ದಾರೆ. ಪುರೋಹಿತರ ಸ್ವಾರ್ಥ, ಸಣ್ಣತನಗಳನ್ನು ವಿಡಂಬಿಸುತ್ತಲೇ ವ್ಯಕ್ತಿ ಪೂಜೆಯನ್ನು ಕಟುವಾಗಿ ಟೀಕಿಸಿದ್ದಾರೆ. ತಮ್ಮ ಸ್ವಾರ್ಥಕ್ಕಾಗಿ ಅನೇಕ ನೀತಿ, ನಿಯಮಗಳನ್ನು ಮಾಡಿಕೊಂಡು ಜನಸಮುದಾಯವನ್ನು ಶೋಷಿಸುತ್ತಿದ್ದ ಅಂದಿನ ಕೆಲವರ ಆಚರಣೆಗಳನ್ನು ಅವರು ಬಹು ಮಾರ್ಮಿಕವಾಗಿ ವಿಡಂಬಿಸಿದ್ದಾರೆ. ಸಕಲಕ್ಕೂ ಬ್ರಾಹ್ಮಣನೇ ದೇವರೆಂದು ಭಾವಿಸಿದ್ದರಿಂದ ಗೌತಮ ಮುನಿಗೆ ಗೋವಧೆ ಮಾಡಿದ ದೋಷ ಬಂತು; ಬಲಿಗೆ ಪಾತಾಳ ಬಂಧನವಾಯಿತು. ಕರ್ಣನು ತನ್ನ ಕರ್ಣಕುಂಡಲಗಳನ್ನು ಕಳೆದುಕೊಂಡ, ದಕ್ಷನು ತನ್ನ ತಲೆಯನ್ನು ಕಳೆದುಕೊಂಡ, ಪರಶುರಾಮ ಸಮುದ್ರದಲ್ಲಿ ಅಂತರ್ಗತನಾದ ನಾಗಾರ್ಜುನನು ಮೃತ್ಯುವಶನಾದ ಎಂದು ಉದಾಹರಿಸುತ್ತಾ; ಬ್ರಾಹ್ಮಣನು ದೇವರಾಗಿದ್ದರೆ ಏಕೆ ಹೀಗಾಗುತ್ತಿತ್ತು? ಎಂದು ವಿಡಂಬಿಸಿದ್ದಾರೆ. ಇಲ್ಲಿಯ ವಿಡಂಬನೆಯಲ್ಲಿ ತೀವ್ರವಾದ ಅಣಕವಿದೆ. ತಾನೇ ದೇವರೆಂದು ಮೆರೆಯುವ ಯಾವುದೇ ಅಹಂಭಾವಿ ವ್ಯಕ್ತಿಗೂ ಸರಿಯಾದ ಉತ್ತರ ಇದಾಗಿದೆ ಮತ್ತು ವ್ಯಕ್ತಿಗಳನ್ನು ದೇವರೆಂದು ಆರಾಧಿಸಿ, ತಮ್ಮ ವಿಪತ್ತನ್ನು ಆಹ್ವಾನಿಸಿದ ಮೂಢ ಭಕ್ತರಿಗೂ ಮಾರ್ಮಿಕ ಮಾರ್ಗದರ್ಶನವಿದೆ. 'ಇವರ ನಡೆ ಒಂದು ಪರಿ, ನುಡಿ ಒಂದು ಪರಿ, ಶಾಸ್ತ್ರಕ್ಕೊಂದು ಬಟ್ಟೆ ತನಗೊಂದು ಬಟ್ಟೆ' ಎಂಬಂತಹ ನುಡಿಗಳಲ್ಲಿ ಅಂದಿನ ಕೆಲವು ವರ್ಗದವರ ಕೌರ್ಯವನ್ನು ಅವರ

ವಿಡಂಬನೆಗೀಡು ಮಾಡಿದ್ದಾರೆ. ದಯೆಯೇ ಧರ್ಮದ ಮೂಲವೆಂದು ಹೇಳಿ ಧರ್ಮದ ಬಗೆಗಿದ್ದ ಗೊಂದಲವನ್ನು ಪರಿಹರಿಸಿದ್ದಾರೆ.

'ಮುಳುಗಿ ಮುಳುಗಿ ಮೂಗ ಹಿಡಿಯುವ ಬ್ರಾಹ್ಮಣನ ಭಕ್ತಿ ಒಡಿನೊಳಗೆ ಅಗೆಯ ಹೊಯ್ದಂತೆ' ಎನ್ನುವಂತಹ ಅವರ ಆ ವಿಡಂಬನೆಗಳಲ್ಲಿ ತೀವ್ರತೆಯಿದೆ. ಡಾಂಭಿಕಾಚರಣೆಗಳಿಂದ ಜನತೆಯನ್ನು ದಿಕ್ಕು ತಪ್ಪಿಸಿದ ಅಂದಿನ ಕೆಲವು ವೈದಿಕರನ್ನು ಕುರಿತು ಹೇಳಿರುವ ಅವರ ನುಡಿಗಳು ನೇರವಾಗಿವೆ. ಸ್ಪಷ್ಟವಾಗಿವೆ. ವರ್ಣಾಶ್ರಮ ಧರ್ಮ, ವೈದಿಕರ ಡಾಂಭಿಕತೆ, ಬ್ರಹ್ಮ - ವಿಷ್ಣು - ದೇವತೆಗಳ ಹೆಸರಿನಲ್ಲಿ ನಡೆಯುವ ಶೋಷಣೆ, ಕರ್ಮಠತನ ಇವುಗಳನ್ನು ಕುರಿತು ಬಸವೇಶ್ವರರು ವಿಡಂಬಿಸುವ ರೀತಿಯೇ ಕುತೂಹಲಕಾರಿಯಾದುದು.

'ಬಡಹಾರುವನೇಸು ಭಕ್ತನಾದಡೆಯೂ
ನೇಣಿನ ಹಂಗ ಬಿಡ !........' (ಬ.ವ. ೪೫೦)

'ಮೂಗ ಮುಚ್ಚಿ ಮುಕ್ತಿಯ ಬಯಸುವ
ನಾಚಿಕೆಯಿಲ್ಲದವರ ನಾನೇನೆಂಬೆ.....' (ಬ.ವ. ೫೭೦)

'ಕಿಚ್ಚುದೈವವೆಂದು ಹವಿಯನಿಕ್ಕುವ ಹಾರುವನ ಮನೆಯಲು
ಕಿಚ್ಚೆದ್ದು ಸುಡುವಾಗ ಬಚ್ಚಲ ನೀರ, ಬೀದಿಯ ಧೂಳವ
ಹೊಯ್ದು ಬೊಬ್ಬಿಟ್ಟೆಲ್ಲರ ಕರೆವರಯ್ಯ !'... (ಬ.ವ. ೫೭೪)
'ವೇದವನೋದಿದ ವಿಪ್ರರು ಹೊನಲಲ್ಲಿ ಹೋದ ಕೋಡ ನೋಡಿರೇ !
ಭರ್ಗೋದೇವಸ್ಯ ಧೀಮಹಿ' ಎಂಬರು
ಒಬ್ಬರಿಗಾಗಿ ವಿಚಾರವಿಲ್ಲ ನೋಡಿರೆ !....' (ಬ.ವ. ೫೭೫)

ಇಂತಹ ಅನೇಕ ವಚನಗಳಲ್ಲಿ ಅಂದಿನ ಕೆಲವರ ವಿಧಿ - ವಿಧಾನಗಳ ಬಗೆಗೆ, ನಡೆ - ನುಡಿಗಳ ಬಗೆಗೆ ಕಟುವಾಗಿ ಟೀಕಿಸಿದ್ದಾರೆ. ಈ ಮೇಲಿನ ಸಾಲುಗಳಲ್ಲಿ ತೀವ್ರತೆಯನ್ನು ಪಡೆದಿರುವ ಅವರ ವಿಡಂಬನೆ ವಸ್ತುನಿಷ್ಠವಾಗಿದೆ, ವಾಸ್ತವತೆಯಿಂದ ಕೂಡಿದೆ. ಹೊಗಳಬೇಕೆಂದು ಹೊಗಳದೇ, ತೆಗಳಬೇಕೆಂದು ತೆಗಳದೆ; ಅಂದಿನ ಸಮಾಜ ವ್ಯವಸ್ಥೆಗೆ ಪ್ರಾಮಾಣಿಕವಾಗಿ ಪ್ರತಿಕ್ರಿಯಿಸಿದಾಗ ಇಂತಹ ಸತ್ಯಗಳು ಕಂಡಿವೆ. ಇಂತಹ ಕಟುವಾಸ್ತವವನ್ನು ಮರೆತು ಎಲ್ಲರೂ ಒಳ್ಳೆಯವರು, ಎಲ್ಲವೂ ಒಂದೇ ಎಂದು ಹೇಳುವುದು ಕಾಣದ ಆದರ್ಶವಾಗುತ್ತದೆಯೇ ಹೊರತು ಕಾಣುವ ವಾಸ್ತವವಲ್ಲ. ಬಸವೇಶ್ವರರು ವಾಸ್ತವವನ್ನು ಬಿಟ್ಟು ಮಾತಾಡುವುದಿಲ್ಲ, ಅಂತೆಯೇ ಅವರಲ್ಲಿ ವಿಡಂಬನೆ ಸಹಜವಾಗಿ ಬಂದಿದೆ.

'ಕೂಸುಕ್ಕಿ ಸೂಳೆ ಧನದಾಸೆಗೆ ಒತ್ತೆಯ ಕೊಂಡಡೆ

'ಸೂಳೆಯ ಮಗ ಮಾಳವ ಮಾಡಿದಡೆ ತಾಯ ಹೆಸರಾಯಿತಲ್ಲದೆ
ತಂದೆಯ ಹೆಸರಿಲ್ಲ ಕೂಡಲ ಸಂಗಮದೇವಾ!' - (ಬ.ವ. ೨೨೬)

'ಕಳಿವ ಹೂವಿನಲ್ಲಿ ಕಂಪನುಳಿದ ಸೂಳೆಯಲ್ಲಿ ಹೆಂಪ
ಕೋಳಚೆಯ ನೀರಿನಲ್ಲಿ ಗುಂಪನರಸುವಿರಿ ಮರುಳೆ' -(ಬ.ವ. ೫೬೨)

'ಮಿಂಟಲಿಗನ ಹಕ್ಕಿಯಂತೆ ನೀರ ತಡಿಯಲ್ಲಿದ್ದು
ಮೂಗ ಹಿಡಿದು ಧ್ಯಾನವ ಮಾಡುವರಯ್ಯ!' (ಬ.ವ. ೫೭೭)

'ನೀರ ಕಂಡಲ್ಲಿ ಮುಳುಗುವರಯ್ಯ
ಮರನ ಕಂಡಲ್ಲಿ ಸುತ್ತುವರಯ್ಯ!' -(ಬ.ವ. ೫೭೯)

'ಸೂಳೆಗೆ ಮೆಚ್ಚಿ ಸೂಳೆಯ ಬಂಟರೆಂಜಲ ತಿಂಬುವರ್ಗೀಲೋಕ
ಅವಗ ಮೆಚ್ಚಿ ಸೊಣಗನೆಂಜಲ ತಿಂಬುವರ್ಗೀ
ಲೋಕವೆಲ್ಲಾ' -(ಬ.ವ. ೭೬೮)

ಈ ಮೊದಲಾದ ವಚನಗಳಲ್ಲಿ ಸಾಮಾಜಿಕ ವಿಡಂಬನೆಯಿದೆ. ಯಜಮಾನ ಸಂಸ್ಕೃತಿಯ ಪ್ರಭಾವ ಜನಸಾಮಾನ್ಯರ ಮೇಲಾಗಿ, ಅದರಿಂದ ಇಡೀ ಸಮಾಜವೇ ಹೇಗೆ ಸಾಂಪ್ರದಾಯಿಕ ನೆಲೆಗಳಲ್ಲಿ ನರಳುತ್ತಿತ್ತೆಂಬುದನ್ನು ಕಂಡುಕೊಂಡ ಬಸವೇಶ್ವರರು, ಪ್ರತಿಯೊಂದು ವಿಷಯಕ್ಕೂ ಆಧಾರ ಕೊಡುತ್ತಾ, ಕಟುವಾಸ್ತವವನ್ನು ಮುಂದಿಡುತ್ತ ವಿಡಂಬಿಸಿದ್ದಾರೆ. ನೀರಕಂಡಲ್ಲಿ ಮುಳುಗುವುದು, ಮರನ ಕಂಡಲ್ಲಿ ಸುತ್ತುವುದು, ಉಳಿದವರನ್ನು ನೋಡಿ ತಾನು ಹಾಗೆ ಮಾಡುವುದು, ಅದೇ ಭಕ್ತಿಯೆಂದು ತಿಳಿಯುವುದು ಅಂದಿನ ಸಮಾಜ ವ್ಯವಸ್ಥೆಯಲ್ಲಿ ಸಾಮಾನ್ಯವಾದಾಗ ಬಸವೇಶ್ವರರು ಜನತೆಯಲ್ಲಿ ವಿಡಂಬನೆಯ ಮೂಲಕ ವಿಚಾರವಾದವನ್ನು ಹುಟ್ಟು ಹಾಕುತ್ತಾರೆ. 'ಸೂಳೆಗೆ ಮೆಚ್ಚಿ ಸೂಳೆಯ ಬಂಟರೆಂಜಲ ತಿಂಬುವರ್ಗೀ ಲೋಕ' ಎನ್ನುವಂತಹ ಮಾತುಗಳಲ್ಲಿ ಕಟು ವಿಡಂಬನೆಯಿದ್ದರೂ, ಅದು ಸಮಾಜದ ಬೆಳವಣಿಗೆಯ ಹಿನ್ನೆಲೆಯಲ್ಲಿ ನೊಂದು ಬಂದ ನುಡಿಯಾಗಿರುವದರಿಂದ ಅವರ ಇಂತಹ ವಿಡಂಬನೆಗಳಿಗೆ ಮಹತ್ವದ ಅರ್ಥವಿದೆ.

'ಉಣಲುಡಲು ಮಾರಿಯಲ್ಲದೆ ಕೊಲಲು ಕಾಯಲು ಮಾರಿಯೆ?
ತನ್ನ ಮಗನ ಜವನೊಯ್ವಲ್ಲಿ ಅಂದೆತ್ತಾ ಹೋದಳಾ ಮಾರಿಕವ್ವೆ?'
-(ಬ.ವ. ೫೫೮)

'ಮೊರನ ಗೋಟಿಗೆ ಬಪ್ಪ ಕಿರುಕುಳ ದೈವಕ್ಕೆ
[illegible] ನಲಿನಲಿದಾಡುವರು;

'ಬನ್ನಿರೆ ಅಕ್ಕಗಳು ಹೋಗಿರೆ ಆಲವ ಮರಕ್ಕೆ
ಕಚ್ಚುವುವೇ ನಿಮ್ಮ ಚಿಪ್ಪಿನ ಹಲ್ಲುಗಳು?
ಬೆಚ್ಚಿಸುವವೆ ನಿಮ್ಮ ಬಚ್ಚಣೆಯ ರೂಹುಗಳು?
-(ಬ.ವ. ೫೬೦)

ಇಂತಹ ವಚನಗಳಲ್ಲಿ ಮರ - ಮಡಿಕೆ - ಕಲ್ಲು - ಬಳ್ಳಿಗಳನ್ನು ದೈವವೆಂದು ಪೂಜಿಸುವವರ ಬಗೆಗೆ ವಿಡಂಬನೆಯಿದೆ. ಕುರಿ - ಕೋಣಗಳನ್ನು ಬಲಿಕೊಟ್ಟು ಶಿವನನ್ನೊಲಿಸುವ ಮೌಢ್ಯತೆಯನ್ನು ಇಲ್ಲಿ ಸೂಕ್ಷ್ಮವಾಗಿ ವಿಡಂಬಿಸಿದ್ದಾರೆ. ಕುರಿಸತ್ತ ಬಳಿಕ ಹರನು ಮುನಿವನಲ್ಲದೆ ಒಲಿಯನು ಎಂದು ಸ್ಪಷ್ಟಪಡಿಸುವ ಇಂತಹ ವಚನಗಳು, ಜನ ಸಾಮಾನ್ಯರಲ್ಲಿರುವ ಅಜ್ಞಾನ, ಮೂಢನಂಬಿಕೆ, ಕಂದಾಚಾರಗಳಿಂದ ಬಿಡುಗಡೆಗೊಂಡು ಹೊಸ ಬದುಕಿನತ್ತ ಹೊರಟು ಬರುವಂತೆ ಸ್ವಾಗತಿಸುತ್ತವೆ. ಅನೇಕ ದೈವಂಗಳನ್ನು ನೆಚ್ಚಿಕೊಂಡು ನಿರಂತರ ಕತ್ತಲಲ್ಲಿದ್ದ ಮಹಿಳೆಯರಿಗೆ ಬಸವೇಶ್ವರರು ಹೊಸ ಮಾರ್ಗವನ್ನು ತೋರಿಸಿದ್ದಾರೆ. ಅವರ ರೀತಿ - ನೀತಿಗಳನ್ನು ವಿಡಂಬನೆಗೆ ಹಚ್ಚುತ್ತಲೆ ಅವರಲ್ಲಿ ಸತ್ಯದರಿವನ್ನು ಹುಟ್ಟಿಸುವ ಇಲ್ಲಿಯ ನುಡಿಗಳು ತಾಯಿಯ ಕೋಪದ ನುಡಿಗಳಂತಿವೆ. ಕೊಡುವಾತ ಕೊಳ್ಳುವಾತ ಒಬ್ಬನೇ ಇರುವಾಗ ನರಮಾನವರು, ಕೀಳು ದೈವಂಗಳು ಕೊಡುವವರೆಂಬುವರ ಬಾಯಲ್ಲಿ ಬಾಳ ಹುಳುಗಳು ಸುರಿವವೆ? ಎಂದು ಪ್ರಶ್ನಿಸುವ ಅವರ ವ್ಯಂಗ್ಯಭರಿತ ನುಡಿಗಳಲ್ಲಿ ಅವರ ಉದಾತ್ತ ಆದರ್ಶವು ಸೇರಿವೆ. ಅಹಂಭಾವವನ್ನು ಪುಡಿಗೊಳಿಸುವ ಅವರ ವಿಚಾರಗಳು ಅಧರಕ್ಕೆ ಕಹಿ ಉದರಕ್ಕೆ ಸಿಹಿಯಾಗಿವೆ.

'ಏನಿಬಂದಿರೆ ಹದುಳವಿದ್ದಿರೆ ಎಂದರೆ ನಿಮ್ಮ ಮೈಸಿರಿ ಹಾರಿ ಹೋಹುದೆ?'
'ಮಸಿಯನೇಸು ಕಾಲ ಬೆಳಗಿದರೂ ಬಿಳಿದಾಗಬಲ್ಲುದೆ?'
'ಹೊರಿಸಿಕೊಂಡು ಹೋದ ನಾಯಿ ಮೊಲನೇನ ಹಿಡಿವುದಯ್ಯ?'
'ತೊತ್ತಿಂಗೇಕೆ ಲಕ್ಷಣ? ಬಂಟಂಗೇಕೆ ಆಚಾರ?'
'ಅರ್ಥರೇಖೆಯಿದ್ದಲ್ಲಿ ಫಲವೇನು, ಆಯುಷ್ಯರೇಖೆಯಿಲ್ಲದನಕ್ಕ?'
'ಮಾಲೆಗಾರನ ಕೇಳಿ ನನೆ ಅರಳುವುದೆ?'
'ಕೋಣನ ಹೇರಿಂಗೆ ಕುನ್ನಿ ಬುಸುಗುಡುವಂತೆ'
'ನಗುತಲಿರಿದು ಕೊಂಡರೆ ಅಲಗು ನಡದಿಹುದೆ?'
'ಹೇಡಿ ಬಿರುದ ಕಟ್ಟಿದರೆ ಕಲಿಯಪ್ಪನೆ?'
'ಹಣವ ಕೊಟ್ಟು ಹಾದರವ ಮಾಡಿದರೆ, ತಾರವ ಕೊಟ್ಟು ಸೂಳೆಗಪ್ಪುಬಾರದೆ?'
'ಬಂಡುಗ ಹಾಲೊಳಗೆ ಒಂದು ಇದ್ದಲಿ ಬಿದ್ದರೇನೂ ಬಿಳೂದಾಗಬಲ್ಲದೆ?'

ಇತಂಹ ಅನೇಕ ನುಡಿಗಳು ವ್ಯಂಗ - ವಿಡಂಬನೆ, ಕಟಕಿ - ಟೀಕೆ, ಪ್ರಶ್ನೆ - ಉಪಪ್ರಶ್ನೆಗಳ ಮೂಲಕ ಜನಸಮೂದಾಯವನ್ನು ಆಲೋಚನೆಗೆ ಹಚ್ಚುತ್ತವೆ. ಆಲೋಚನೆಯಿಲ್ಲದೆ, ಚಿಂತನೆಯಿಲ್ಲದೆ; ವಿಚಾರವಿಲ್ಲದೆ, ವಿವೇಕವಿಲ್ಲದೆ ಯಾರೋ ಹೇಳಿದಂತೆ ಬದುಕುವ ಸಾಮಾನ್ಯ ಜನತೆಯ ವಿಚಿತ್ರ ರೀತಿಯ ಬದುಕನ್ನು ಕಂಡು ಬಸವೇಶ್ವರರು ಖೇದ ವ್ಯಕ್ತಪಡಿಸಿದ್ದಾರೆ. ಯಾವುದು ಸರಿ, ಯಾವುದು ತಪ್ಪು ಎಂದು ತಿಳಿದುಕೊಳ್ಳುವಷ್ಟು ಅವರಲ್ಲಿ ಜಾಣ್ಮೆಯಿರದ್ದನ್ನು ಕಂಡು, ಹತ್ತರೊಳಗೆ ಹನ್ನೊಂದಾಗಿ ಬದುಕುವ ಅವರ ಅಸಹಾಯಕತೆಯನ್ನು ಕಂಡು ಮರುಗಿದ್ದಾರೆ.

ಹೀಗೆ ಮರುಗಿದಾಗ, ಖೇದಗೊಂಡಾಗ, ಕನಲಿದಾಗ, ಸಿಡಿಮಿಡಿಗೊಂಡಾಗ ಅವರಿಂದ ಇಂತಹ ಹರಿತವಾದ ನುಡಿಗಳು ಅಭಿವ್ಯಕ್ತಗೊಂಡಿವೆ. ಇಲ್ಲಿಯ ಒಂದೊಂದು ನುಡಿಯ ಹಿಂದೆಯೂ ಅಂದಿನ ಸಮಾಜ ವ್ಯವಸ್ಥೆಯ ಒಂದೊಂದು ಕತೆಗಳಿವೆ.

ಸ್ವತಃ ತಮ್ಮನ್ನೇ ತಾವು ವಿಡಂಬಿಸಿಕೊಂಡಿರುವ ಬಸವೇಶ್ವರರಿಗೆ ಸಮಾಜವನ್ನು ವಿಡಂಬಿಸುವ ನೈತಿಕ ಹಕ್ಕಿದೆ. ತಮ್ಮ ಮೂಲಕ ಸಮಾಜವನ್ನು, ಸಮಾಜದ ಮೂಲಕ ತಮ್ಮನ್ನು ಕಂಡುಕೊಳ್ಳುವ ಅವರ ವಿಚಾರಗಳಲ್ಲಿ ಮನುಷ್ಯ ಸಹಜ ಸಂಬಂಧವಿದೆ.

'ಸೂಳೆಗೆ ಹುಟ್ಟಿದ ಕೂಸಿನಂತೆ
ಆರನಾದಡೆಯೂ ಅಯ್ಯಾ ಅಯ್ಯಾ ಎನಲಾರೆ' - (ಬ.ವ. ೩೪೬)
'ಹೊಸತಿಲ ಪೂಜಿಸಿ ಹೊರವಂಟು ಹೋದ
ಒಕ್ಕಲಿತಿಯಂತಾಯಿತೆನ್ನ ಭಕ್ತಿ' - (ಬ.ವ. ೪೨೨)
'ಹಡಕೆಗೆ ಮೆಚ್ಚಿದ ಸೊಣಗ
ಅಮೃತದ ರುಚಿಯ ಬಲ್ಲುದೆ ಕೂಡಲ ಸಂಗಮದೇವಾ' - (ಬ.ವ. ೩೧೩)
'ಊರ ಸೀರೆಗೆ ಆಗಸ ತಡೆಬಡಿವಡದಂತೆ
ಹೊನ್ನೆನ್ನದು, ಹೆಣ್ಣೆನ್ನುದು, ಮಣ್ಣೆನ್ನದು
ಎಂದು ಮರುಳಾದೆ' (ಬ.ವ. ೩೦೯)

ಅವರ ಸ್ವ ವಿಡಂಬನೆಗೆ ಇಂತಹ ಅನೇಕ ವಿಚಾರಗಳನ್ನು ಉದಾಹರಿಸಬಹುದು. ಸ್ವವಿಮರ್ಶೆ, ಸ್ವವಿಡಂಬನೆ ಮಾಡಿಕೊಳ್ಳುವಾತನಿಗೆ ಮಾತ್ರ ಸಮಾಜ ವಿಮರ್ಶೆ ಮಾಡುವ, ಸಮಾಜ ವಿಡಂಬನೆ ಮಾಡುವ ನೈತಿಕತೆ ಇದೆ. ಬಸವೇಶ್ವರರು ತಾವು ತಪ್ಪು ಮಾಡದಿದ್ದರೂ 'ಡಂಬುಡಳಿಹು

ಬೇಡುವಂತೆ ಎನ್ನ ಭಕ್ತಿ' 'ಒತಿ ಬೇಲಿವರಿದಂತೆ ಎನ್ನ ಮನವಯ್ಯ' ಎಂದರು. 'ಮಸಿಯನೇಸುಕಾಲ ಬೆಳಗಿದರೆ ಬಿಳಿದಾಗಬಲ್ಲುದೆ?' ಎಂದು ಕೇಳಿಕೊಂಡರು. ಹೀಗೆ ತಾನು ಬೇರೆ ಇತರರು ಬೇರೆಯೆಂಬ ಭೇದ ಅವರಲ್ಲಿಲ್ಲ. ತಾನು ವಿಚಾರವಂತ ಇತರರು ದಡ್ಡರು ಎಂಬ ಹಮ್ಮಿನ ಭ್ರಮೆಯೂ ಇರಲಿಲ್ಲ. ತಾನು ಸಮಾಜ ವ್ಯವಸ್ಥೆಯ ಭಾಗವೆಂದು ತಿಳಿದು ಸಮಾಜ ವ್ಯವಸ್ಥೆಯ ಲೋಪ - ದೋಷಗಳನ್ನು ಎತ್ತಿ ತೋರಿಸಿದ ಬಸವೇಶ್ವರರು ವಿಶಿಷ್ಟ ರೀತಿಯ ವಿಡಂಬನಕಾರರಾಗಿದ್ದಾರೆ.

-ಡಾ॥ ಬಸವರಾಜ ಸಬರದ
ರೀಡರ್, ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

ಬಸವ (ಲಿಂಗಾಯತ) ಧರ್ಮದ ಆರು ಸೂತ್ರಗಳು

೧. ಧರ್ಮ ಗುರು-
ಮಂತ್ರಪುರುಷ ವಿಶ್ವಗುರು ಬಸವಣ್ಣನವರು
೨. ಧರ್ಮ ಸಂಹಿತೆ-
ಸಮಾನತೆ ಸಾರುವ ವಚನ ಸಾಹಿತ್ಯ.
೩. ಧರ್ಮ ಲಾಂಛನ-
ವಿಶ್ವದಾಕಾರದಲ್ಲಿರುವ ಪರಮಾತ್ಮನ ಕುರುಹಾದ ಇಷ್ಟಲಿಂಗ
೪. ಧರ್ಮ ಕ್ಷೇತ್ರ-
ಬಸವಣ್ಣನವರ ಐಕ್ಯಸ್ಥಾನ ಕೂಡಲ ಸಂಗಮ
೫. ಧರ್ಮ ಧ್ವಜ-
ಬಸವ ಮಂತ್ರ ಸಹಿತ ಷಟ್ಕೋನ ಧ್ವಜ.
೬. ದರ್ಮದ ಧ್ಯೇಯ-
ಜಾತಿವರ್ಣವರ್ಗರಹಿತ, ಧರ್ಮ ಸಹಿತ ಕಲ್ಯಾಣ ರಾಜ್ಯ ನಿರ್ಮಾಣ.

ಕೂಡಲ ಸಂಗಮ ಸುಕ್ಷೇತ್ರದಲ್ಲಿ

ಬಸವ ಕ್ರಾಂತಿ ದಿನ 15-1-1988 ರಂದು ಶರಣ ಸಮುದಾಯವು ಪ್ರತಿಜ್ಞಾಪೂರ್ವಕವಾಗಿ ಘೋಷಿಸಿದ ಸೂತ್ರಗಳು.

ಕರ್ತವ್ಯ

ಬಸವ ಕ್ರಾಂತಿಯ ದಿನದಿ ಸಂಗಮಕ್ಕೆ ನೀ ಬಂದು
ಬಸವ ಸಾಗರದೊಳಗೆ ಮಿಂದು ಪುಳಕಿತನಾಗು

ಕೂಡಲ ಸಂಗಮ ಕ್ರಾಸಿಗೆ ಬರುವ
ಕ.ರಾ.ರ.ಸಾ. ಸಂಸ್ಥೆ ಬಸ್ಸುಗಳ ವಿವರ

ರಾಷ್ಟ್ರೀಯ ಹೆದ್ದಾರಿ ನಂ. 13, ಬೆಂಗಳೂರು - ಸೊಲ್ಲಾಪುರವನ್ನು ಸಂಪರ್ಕಿಸುವ ರಸ್ತೆ. ಬೆಂಗಳೂರಿನಿಂದ ಚಿತ್ರದುರ್ಗದವರೆಗೆ, ರಾಷ್ಟ್ರೀಯ ಹೆದ್ದಾರಿ 4 ಮತ್ತು 13 ಒಂದೇ ಇದ್ದು, ಚಿತ್ರದುರ್ಗದಿಂದ 13 ನೇ ನಂಬರ್ ಟಿಸಿಲು ಒಡೆಯುತ್ತದೆ. ಚಿತ್ರದುರ್ಗ, ಹೊಸಪೇಟೆ - ಕುಷ್ಟಗಿ - ಇಳಕಲ್ - ಹುನಗುಂದ - ಆಲಮಟ್ಟಿ ಹೀಗೆ ಬಿಜಾಪುರ - ಸೊಲ್ಲಾಪುರಕ್ಕೆ ಸಾಗುತ್ತದೆ. ಹುನಗುಂದ ದಾಟಿದ ಮೇಲೆ, ಆಲಮಟ್ಟಿಗೆ ಮೊದಲು ಕೂಡಲ ಸಂಗಮ ಕ್ರಾಸ್ ಬರುತ್ತದೆ. ಇಲ್ಲಿಗೆ ಕೂಡಲ ಸಂಗಮವು 7 ಕಿಲೋಮೀಟರ್ ಇರುತ್ತದೆ. ಈ ಸ್ಥಳಕ್ಕೆ ಬಾಗಲಕೋಟೆ, ಇಳಕಲ್, ಬಾದಾಮಿ, ಬಿಜಾಪುರ ಮುಂತಾದ ಸ್ಥಳಗಳಿಂದ ಬರುವ ರಸ್ತೆ ಕೂಡುತ್ತವೆ. ಈ ಕ್ರಾಸಿಗೆ ಬಂದು ಹೋಗುವ ಬಸ್ಸುಗಳ ವಿವರ ಕೊಡಲಾಗಿದೆ. ನೇರವಾಗಿ ಕೂಡಲ ಸಂಗಮಕ್ಕೆ ಬರುವ ಮತ್ತು ಇಲ್ಲಿಂದಲೇ ಹೊರಡುವ ಬಸ್ಸುಗಳನ್ನು * ಹೀಗೆ ಗುರುತಿಸಲಾಗಿದೆ.

	ಬರುವ ವೇಳೆ	ಬಿಡುವ ವೇಳೆ
1. ಕೂಡ್ಲಿಗಿ-ಸಂಗಮ *	ಸಂಜೆ 6-15	
2. ಸಂಗಮ-ಕೂಡ್ಲಿ *		ಬೆಳಿಗ್ಗೆ 6-15
3. ಸೊಲ್ಲಾಪುರ-ಇಳಕಲ್	ರಾತ್ರಿ 10-30	
4. ಇಳಕಲ್-ಸೊಲ್ಲಾಪುರ		ಬೆಳಿಗ್ಗೆ 6-30
5. ಸವದತ್ತಿ-ಸಂಗಮ*	ಸಂಜೆ 7-30	
6. ಸಂಗಮ-ಸವದತ್ತಿ *		ಬೆಳಿಗ್ಗೆ 7-30
7. ಸಂಕೇಶ್ವರ-ಸಂಗಮ*	ಸಂಜೆ 7-30	
8. ಸಂಗಮ-ಸಂಕೇಶ್ವರ *		ಬೆಳಿಗ್ಗೆ 7-30
9. ಬಾದಾಮಿ-ಸಂಗಮ *	ರಾತ್ರಿ 8-30	
10. ಸಂಗಮ-ಬಾದಾಮಿ *		ಬೆಳಿಗ್ಗೆ 7-00
11. ಇರಳಕಲ್-ಬಿಜಾಪುರ		ಬೆಳಿಗ್ಗೆ 8-00
12. ಬಿಜಾಪುರ-ಇಳಕಲ್	ರಾತ್ರಿ 8-00	
13. ಬೆಂಗಳೂರು-ಇಂಡಿ		ಬೆಳಿಗ್ಗೆ 7-30
14. ಇಂಡಿ-ಬೆಂಗಳೂರು	ರಾತ್ರಿ 12-30	
15. ಬಾಗಲಕೋಟೆ-ಸಂಗಮ *		ಬೆಳಿಗ್ಗೆ 9-10
16. ಸಂಗಮ-ಬಾಗಲಕೋಟೆ *		ಬೆಳಿಗ್ಗೆ 10-00
17. ಇಳಕಲ್-ಸಂಗಮ *		ಬೆಳಿಗ್ಗೆ 8-00
18. ಬಾಗಲಕೋಟೆ-ಸಂಗಮ *		ಬೆಳಿಗ್ಗೆ 10-30
19. ಸಂಗಮ-ಬಾಗಲಕೋಟೆ *		ಬೆಳಿಗ್ಗೆ 11-30
20. ಅಕ್ಕಿ ಆಲೂರು-ಬಿಜಾಪುರ	ಸಂಜೆ 5-00	
21. ಬಿಜಾಪುರ-ಅಕ್ಕಿ ಆಲೂರು		ಬೆಳಿಗ್ಗೆ 9-00

23. ಬಿಜಾಪುರ-ಕೊಪ್ಪಳ	ಸಂಜೆ 6-00	
24. ಹಿರೇಕೆರೂರ-ಬಿಜಾಪುರ	ಸಂಜೆ 10-30	
25. ಬಿಜಾಪುರ-ಹಿರೇಕೆರೂರು	ಸಂಜೆ 6-30	
26. ಹುನಗುಂದ-ಸಂಗಮ *		ಬೆಳಿಗ್ಗೆ 10-00
27. ಇಳಕಲ್-ಸಂಗಮ *		ಮಧ್ಯಾಹ್ನ 12-00
28. ಕೊಪ್ಪಳ-ತಾಳೀಕೋಟೆ		ಬೆಳಿಗ್ಗೆ 10-30
29. ತಾಳೀಕೋಟೆ-ಕೊಪ್ಪಳ	ಸಂಜೆ 4-30	
30. ಲಕ್ಷ್ಮೇಶ್ವರ-ಇಂಡಿ	ಸಂಜೆ 4-30	
31. ಇಂಡಿ-ಲಕ್ಷ್ಮೇಶ್ವರ		ಬೆಳಿಗ್ಗೆ 11-00
32. ಬೆಂಗಳೂರು-ಸಂಗಮ *	ಬೆಳಿಗ್ಗೆ 6-30	
33. ಸಂಗಮ-ಬೆಂಗಳೂರು *		ಸಂಜೆ 7-00
34. ಅಮೀನಗಡ-ಸಂಗಮ *	ಸಂಜೆ 4-00	
35. ಬಾಗಲಕೋಟೆ-ಸಂಗಮ *	ಸಂಜೆ 4-00	
36. ಬಾಗಲಕೋಟೆ-ಸಂಗಮ *		ಮಧ್ಯಾಹ್ನ 12-00
37. ಸಂಗಮ-ಬಾಗಲಕೋಟೆ *		ಮಧ್ಯಾಹ್ನ 1-30
38. ಸಂಗಮ-ಬಾಗಲಕೋಟೆ *	ಸಂಜೆ 4-30	
39. ಮೈಸೂರು-ಸೊಲ್ಲಾಪುರ		ಬೆಳಿಗ್ಗೆ 5-00
40. ಸೊಲ್ಲಾಪುರ-ಮೈಸೂರು	ರಾತ್ರಿ 9-00	
41. ಸೂಪರ್ ಡೀಲಕ್ಸ್ ಬೆಂಗಳೂರು-ಬಿಜಾಪುರ		ಬೆಳಿಗ್ಗೆ 6-00
42. ಸೂಪರ್ ಡಿಲಕ್ಸ್ ಬಿಜಾಪುರ-ಬೆಂಗಳೂರ	ಸಂಜೆ 7-30	
43. ಸೆಮಿ ಲಕ್ಷುರಿ ಬೆಂಗಳೂರು-ಬಿಜಾಪುರ		ಬೆಳಿಗ್ಗೆ 4-30
44. ಸೆಮಿ ಲಕ್ಷುರಿ ಬಿಜಾಪುರ-ಬೆಂಗಳೂರು	ರಾತ್ರಿ 11-00	
45. ಬೆಂಗಳೂರು-ಬಿಜಾಪುರ	ಸಂಜೆ 6-00	
46. ಹಟ್ಟಿ-ಸಂಗಮ	ರಾತ್ರಿ 9-00	ಬೆಳಿಗ್ಗೆ 6-20
47. ಸಿಂಧನೂರು-ಸಂಗಮ	ಮಧ್ಯಾಹ್ನ 12-30	ಮಧ್ಯಾಹ್ನ 1-30

1. ಶರಣ ಮೇಳ ಉತ್ಸವ ಸಮಿತಿಯು ಸಂಗಮ ಕ್ರಾಸಿನಲ್ಲಿ ಒಂದು ಶಾಮಿಯಾನ ಹಾಕಿಸುತ್ತದೆ. ಆವೇಳೆಯಲ್ಲಿ ಬಂದವರು ಕುಳಿತುಕೊಳ್ಳಲು ಮತ್ತು ವಿವರಗಳನ್ನು ಪಡೆಯಲು ಈ ವಿಚಾರಣಾ ಕೇಂದ್ರ ಲಭ್ಯವಿರುತ್ತದೆ.

2. ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯು ದಿ. 12.1.93 ರಿಂದ 16.1.93ರ ವರೆಗೆ, ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 13 ರ ಮೇಲೆ ಸಂಚರಿಸುವ ನಿಗಮದ ಎಲ್ಲ ಸಾರಿಗೆಗಳಿಗೆ ಕೂಡಲ ಸಂಗಮ ಅಡ್ಡರಸ್ತೆಯಲ್ಲಿ ನಿಲ್ಲಿಸಲು ಸೂಚನೆ

ಓಂ ಶ್ರೀ ಗುರುಬಸವಲಿಂಗಾಯ ನಮಃ

1993 ನೇ ಸಾಲಿನ ಹಬ್ಬ - ಹುಣ್ಣಿಮೆಗಳು-ಜನ್ಮದಿನೋತ್ಸವಗಳು

1.	ಬಸವ ಕ್ರಾಂತಿದಿನದ ಅಂಗವಾಗಿ ಶರಣಮೇಳ	ಜನವರಿ 12 ರಿಂದ
2.	ಬಸವ ಧರ್ಮದ ಮಹಾಜಗದ್ಗುರು ಪೀಠ ಸ್ಥಾಪನೆಯ ವಾರ್ಷಿಕೋತ್ಸವ	ಜನವರಿ 12
3.	ಬಸವ ಕ್ರಾಂತಿ ದಿನ ಮತ್ತು ಸಿದ್ಧರಾಮೇಶ್ವರ ಜಯಂತಿ	*14
4.	ಗಣರಾಜ್ಯೋತ್ಸವ ದಿನ	*26
5.	ಚನ್ನ ಹುಣ್ಣಿಮೆ (ಉಳವಿ ಜಾತ್ರೆ) ಚನ್ನಬಸವಲಿಂಗೈಕ್ಯ ದಿನ	ಫೆಬ್ರವರಿ 6
6.	ಸರ್ವಶರಣರ ದಿನಾಚರಣೆ (ಶಿವರಾತ್ರಿ)	* ಫೆಬ್ರವರಿ 19
7.	ಪೂಜ್ಯ ಮಾತಾಜಿಯವರ ವರ್ಧಂತಿ	ಮಾರ್ಚ್ 13
8.	ಅಲ್ಲಮ ಪ್ರಭುದೇವರ ಜಯಂತಿ	* ಮಾರ್ಚ್ 24
9.	ಅಕ್ಕಮಹಾದೇವಿ ಜಯಂತಿ (ದವನದ ಹುಣ್ಣಿಮೆ)	ಏಪ್ರಿಲ್ 6
10.	ಬಸವ ಜಯಂತಿ (ಶ್ರಾವಣ ಶುದ್ಧ ಪಂಚಮಿ)	* ಏಪ್ರಿಲ್ 25
11.	ಮಡಿವಾಳ ಮಾಚಿದೇವ ಜಯಂತಿ ಮತ್ತು ಕಾಯಕ ದಿನಾಚರಣೆ	* ಮೇ 1
12.	ಬಸವ ಪಂಚಮಿ (ಶ್ರಾವಣ ಶುದ್ಧ ಪಂಚಮಿ)	ಜುಲೈ 23
13.	ನೀಲಮ್ಮ ಷಷ್ಠಿ	ಜುಲೈ 24
14.	ಸ್ವಾತಂತ್ರ್ಯ ದಿನೋತ್ಸವ	* ಆಗಸ್ಟ್ 15
15.	ಪೂಜ್ಯ ಶ್ರೀ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳ ವರ್ಧಂತಿ	* ಸೆಪ್ಟಂಬರ 19
16.	ಗಾಂಧಿ ಜಯಂತಿ	* ಅಕ್ಟೋಬರ್ 2
17.	ಕಲ್ಯಾಣ ಕ್ರಾಂತಿ ದಿನ (ಮಹಾನವಮಿ)	* ಅಕ್ಟೋಬರ್ 24
18.	ಬಸವ ಧರ್ಮ ವಿಜಯೋತ್ಸವ (ವಿಜಯದಶಮಿ) ಅಕ್ಕ ನಾಗಲಾಂಬಿಕಾ ಸಂಸ್ಮರಣಾ ದಿನ	* ಅಕ್ಟೋಬರ್ 25
19.	ಕನ್ನಡ ರಾಜ್ಯೋತ್ಸವ	* ನವಂಬರ್ 1
20.	ಚನ್ನಬಸವ ಜಯಂತಿ (ಕಾರ್ತೀಕ ಪ್ರತಿಪದೆ)	* ನವಂಬರ್ 14

* ಸರ್ಕಾರಿ ರಜಾದಿನಗಳು

ಪ್ರಕಟಣೆ :

ಬಸವ ಧರ್ಮದ ಮಹಾಜಗದ್ಗುರು ಪೀಠ
ಮಹಾಮನೆ ಮಹಾಮಠ
ಕೂಡಲ ಸಂಗಮ - 587115
ತಾ - ಹುನಗುಂದ, ಜಿಲ್ಲಾ - ಬಿಜಾಪುರ

KALYANA KIRANA-Monthly magazine Printed and Published by B. Shambhulingaiah, at Prabhudeva Printing Press, Basava Gangotri, Kumbalgod Bangalore-560 074.

ಬಸವ ಭಕ್ತರ ಪ್ರತಿಜ್ಞೆ

ಬಸವ ಭಕ್ತರು ನಾವು ಬಸವ ಭಕ್ತರು
ತತ್ತ್ವನಿಷ್ಠರು ನಾವು ತತ್ತ್ವನಿಷ್ಠರು ॥ ಪ ॥

"**ಧರ್ಮಗುರು ಬಸವಣ್ಣ**" ಎಂದು ಸಾರಿ ನುಡಿವೆವು.
"ವಚನ ಶಾಸ್ತ್ರ ಸಂವಿಧಾನ"ವೆಂದು ತಿಳಿದು ನಡೆವೆವು
"ಇಷ್ಟಲಿಂಗ ದೇವಕುರುಹು" ಎಂದು ನಂಬಿ ಪೂಜಿಪೆವು
"ಸಂಗಮವು ಧರ್ಮಕ್ಷೇತ್ರ" ಎಂದು ತಿಳಿದು ಬರುವೆವು ॥೧॥

"ಷಟ್ಕೋನ ಬಸವ ಧ್ವಜವ" ಹಿಗ್ಗಿನಿಂದ ಹಾರಿಪೆವು.
"ಕಲ್ಯಾಣ ರಾಜ್ಯ" ಕಟ್ಟುವ ಧ್ಯೇಯವಿಟ್ಟು ದುಡಿವೆವು
"ಶರಣ ಮೇಳ"ದಲ್ಲಿ ಕೂಡಿ, ಹಾಡಿ ಪಾಡಿ ನಲಿವೆವು
"ಬಸವ ಧರ್ಮಪೀಠ"ದ ಆದೇಶದಂತೆ ನಡೆವೆವು ॥೨॥

"**ಅಷ್ಟಾವರಣ**" ಅಂಗವೆಂದು ನಾವು ನಿತ್ಯ ಧರಿಪೆವು
"**ಪಂಚಾಚಾರ**" ಪ್ರಾಣವೆಂದು ಅನುಷ್ಠಾನಗೈವೆವು ।
"ಷಟಸ್ಥಲ" ಶಿವಪಥದಿ ಶ್ರದ್ಧೆಯಿಂದ ಸಾಗುವೆವು
ಗುರುಬಸವ ತಂದೆಯು ಮೆಚ್ಚುವಂತೆ ಬಾಳುವೆವು ॥೩॥

ಜಾತಿವಾದ ಮನುಜಗೈದ ತಂತ್ರವೆಂದು ಸಾರುವೆವು
ನೀತಿಸಿರಿಯು ಒಂದೆ ಶ್ರೇಷ್ಠ ಸೂತ್ರವೆಂದು ತಿಳಿವೆವು
ದೇವನೊಬ್ಬ ನಮ್ಮ ತಂದೆ ಮನುಜರೆಲ್ಲರೊಂದೆ ಎಂದು
ವಿಶ್ವಸೋದರತ್ವ ಸಾರಿ ಕಲ್ಯಾಣರಾಜ್ಯ ಕಟ್ಟುವೆವು ॥೪॥

—ಜಗದ್ಗುರು ಮಾತೆ ಮಹಾದೇವಿ

[ಬಸವ ತತ್ತ್ವಾನುಯಾಯಿಯ ಜೀವನದ ನಂಬಿಕೆ ಆಚರಣೆ ಹೇಗಿರಬೇಕೆಂಬುದನ್ನು ತಿಳಿಸುವ ಈ ಪದ್ಯವನ್ನು ಮನನ ಮಾಡಬೇಕು. ಕಲಿಯಬೇಕು.]

ಶರಣಮೇಳ ಉತ್ಸವ ಸಮಿತಿ

ಮಹಾಮನೆ ಮಹಾಮಠ.

ಕೂಡಲ ಸಂಗಮ-587 115.

ತಾ-ಹುನಗುಂದ. ಜಿಲ್ಲಾ-ಬಿಜಾಪುರ.

ಕರ್ನಾಟಕ

